ನಿವಾಸಿಗಳಿಂದ ವಿದೇಶದಲ್ಲಿರುವ ಜಂಟಿ ಉದ್ಯಮದಲ್ಲಿ (ಜೆವಿ)/ಸಂಪೂರ್ಣ ಸ್ವಾಮ್ಯದ ಅಂಗ ಸಂಸ್ಥೆಗಳಲ್ಲಿ ನೇರ ಹೂಡಿಕೆ.

ವಿದೇಶದಲ್ಲಿನ ಜಂಟಿ ಉದ್ಯಮದಲ್ಲಿ ಸಂಪೂರ್ಣ ಒಡೆತನ ಹೊಂದಿರುವ ಅಧೀನ ಘಟಕಗಳಲ್ಲಿ ನಿವಾಸಿಗಳಿಂದ ನೇರ ಬಂಡವಾಳ ಹೂಡಿಕೆ.

1: ಸಾಗರೋತ್ತರ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ಮಾರ್ಗಸೂಚಿಗಳು ಎಲ್ಲಿ ದೊರೆಯುತ್ತವೆ?

ಭಾರತೀಯ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿರುವ ಮಾರ್ಗಸೂಚಿಗಳನ್ನು ಅಧಿಸೂಚನೆ ಸಂಖ್ಯೆ ಎಫ್ಇಎಂಎ 120 ದಿನಾಂಕ 7 ಜುಲೈ 2004ರ ಮೂಲಕ ಅಧಿಸೂಚಿಸಿದ್ದು, ಅವುಗಳನ್ನು ರಿಸರ್ವ್ ಬ್ಯಾಂಕಿನ ವೆಬ್‌ಸೈಟ್ **fema.rbi.org.in** ನಿಂದ ಪಡೆದುಕೊಳ್ಳಬಹುದು. ವಿದೇಶದಲ್ಲಿನ ಜಂಟಿ ಉದ್ಯಮದಲ್ಲಿ (JVS) ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ(WOS) ಭಾರತೀಯ ನೇರ ಹೂಡಿಕೆಗೆ ಹಕ್ಕು ನೀಡುವ ದಿನಾಂಕ 1/7/2004ರ ಒಂದು ಪ್ರಧಾನ ಸುತ್ತೋಲೆಯು ಆ ದಿನಾಂಕದವರೆಗಿನ ಬೆಳವಣಿಗೆಗಳನ್ನು ಒಳಗೊಳ್ಳುವಂಥ ಎಲ್ಲಾ ಅಧಿಸೂಚನೆಗಳ/ಸುತ್ತೋಲೆಗಳ ಸಂಗ್ರಹವನ್ನು ಒಳಗೊಂಡಿದ್ದು, ಇದು ಸಹ ವೆಬ್‌ಸೈಟ್ rbi.org.in ನಲ್ಲಿ ದೊರೆಯುತ್ತದೆ.

2: ಸಾಗರೋತ್ತರ ಬಂಡವಾಳ ಹೂಡಿಕೆ ಕುರಿತ ಮಾರ್ಗಸೂಚಿಗಳಿಗೆ ಸಂಬಂಧಿಸಿರುವ ಸ್ಪಷ್ಟೀಕರಣಗಳನ್ನು ಎಲ್ಲಿ ಪಡೆಯಬಹುದು?

ದಯವಿಟ್ಟು ಮೇಲಿನ ಪ್ರಶ್ನೆ 1ಕ್ಕೆ ನೀಡಿರುವ ಉತ್ತರವನ್ನು ನೋಡಿ. ಸೂಚನೆಗಳಲ್ಲಿ ಒಳಗೊಂಡಿರದ ಪ್ರಕರಣಗಳಿಗೆ ಸಂಬಂಧಿಸಿದ ಯಾವುದೇ ಸ್ಪಷ್ಟೀಕರಣವನ್ನು ಪ್ರಕರಣದ ಪೂರ್ಣ ವಿವರಗಳನ್ನು ನೀಡಿ. ಈ ಕೆಳಗಿನ ವಿಳಾಸದಲ್ಲಿರುವ ರಿಸರ್ವ್ ಬ್ಯಾಂಕಿನ ಕೇಂದ್ರ ಕಚೇರಿಯಿಂದ ಪಡೆಯಬಹುದು:

ಭಾರತೀಯ ರಿಸರ್ವ್ ಬ್ಯಾಂಕು
ವಿದೇಶಿ ವಿನಿಮಯ ಇಲಾಖೆ
ಸಾಗರೋತ್ತರ ಬಂಡವಾಳ ಹೂಡಿಕೆ ವಿಭಾಗ
ಕೇಂದ್ರ ಕಚೇರಿ, ಅಮರ ಬಿಲ್ಡಿಂಗ್,
3ನೇ ಮಹಡಿ,
ಮುಂಬೈ–400 001.

ಅಥವಾ ಇ–ಮೇಲ್ oid@rbi.org.in

3: ಭಾರತದ ಹೊರಗಡೆ ನೇರ ಬಂಡವಾಳ ಹೂಡಿಕೆ ಎಂದರೇನು?

ಭಾರತದ ಹೊರಗಡೆ ನೇರ ಬಂಡವಾಳ ಹೂಡಿಕೆ ಎಂದರೆ, ಸಾಗರೋತ್ತರ ಸಂಸ್ಥೆಯಲ್ಲಿ ದೀರ್ಘಾವಧಿ ಹಿತಾಸಕ್ತಿಯನ್ನು ಸೂಚಿಸುವ (ಜಂಟಿ ಉದ್ಯಮ ಅಥವ ಸಂಪೂರ್ಣ ಒಡೆತನದ ಅಧೀನ ಘಟಕದ ಸ್ಥಾಪನೆಗಾಗಿ) ಒಂದು ವಿದೇಶಿ ಸಂಸ್ಥೆಯ ಬಂಡವಾಳಕ್ಕೆ ಕೊಡುಗೆ ನೀಡುವ ಅಥವಾ ಸಂಸ್ಥಾಪನಾ ಪತ್ರಕ್ಕೆ ವಂತಿಗೆ ನೀಡುವ ರೂಪದಲ್ಲಿ ಬಂಡವಾಳ ಹೂಡಿಕೆ, ಆದರೆ, ಪೋರ್ಟ್ ಫೋಲಿಯೋ ಬಂಡವಾಳ ಹೂಡಿಕೆ ಒಳಗೊಳ್ಳುವುದಿಲ್ಲ.

4: ಪ್ರಶ್ನೆ 3 ರಲ್ಲಿ ನೀಡಲಾದಂಥ ಅರ್ಹ ವಿವರಣೆಯ ಅರ್ಹ ಯಾರಾದರೂ ಅಸ್ತಿತ್ವದಲ್ಲಿರುವ ಒಂದು ಕಂಪನಿಯನ್ನು ಭಾಗಶಃವಾಗಿಯಾಗಲಿ ಅಥವಾ ಸಂಪೂರ್ಣವಾಗಿಯಾಗಲಿ ಹೊಂದಲು ಆಗುವುದಿಲ್ಲವೆಂದೇ?

ಇಲ್ಲ, ಒಂದು ಅರ್ಹ ಸಂಸ್ಥೆಯು ಈಗಾಗಲೇ ಅಸ್ತಿತ್ವದಲ್ಲಿರುವ ಒಂದು ಕಂಪನಿಯಲ್ಲಿನ ಭಾಗಶಃ ಹೂಡಿಕೆಯನ್ನಾಗಲೀ (ಜಂಟಿ ಉದ್ಯಮ) ಅಥವಾ ಸಂಪೂರ್ಣ ಈಕ್ವಿಟಿ (WOS) ಯನ್ನಾಗಲೀ ಆರ್ಜಿಸುವುದಕ್ಕೆ ಮುಕ್ತವಾಗಿರುತ್ತದೆ. ಆದರೆ ಮೌಲ್ಯ ನಿರ್ಣಯವು ವಿಧಿಸಿರುವ ನಿಯಮಗಳಿಗನುಸಾರವಾಗಿರುತ್ತದೆ (ದಯವಿಟ್ಟು ಪ್ರಶ್ನೆ 16ರ ಉತ್ತರ ನೋಡಿ)

5: ಸಾಗರೋತ್ತರ ನೇರ ಬಂಡವಾಳ ಹೂಡಿಕೆ ಮಾಡಲು ಯಾರು ಅರ್ಹರು?

ಭಾರತೀಯ ಪಾಲುದಾರಿಕೆ ಅಧಿನಿಯಮ, 1932ರ (ಇಂಡಿಯನ್ ಪಾರ್ಟಿ) ಅಡಿಯಲ್ಲಿ ನೋಂದಾಯಿತವಾದ ನಿವಾಸಿ ನಿಗಮಿತ ಸಂಸ್ಥೆಗಳು ಮತ್ತು ಪಾಲುದಾರಿಕೆ ಸಂಸ್ಥೆಗಳು ವಿದೇಶಿ ಜಂಟಿ ಉದ್ಯಮಗಳಲ್ಲಿ /ಸಂಪೂರ್ಣ ಒಡೆತನದ ಅಧೀನ ಘಟಕಗಳಲ್ಲಿ ನೇರ ಬಂಡವಾಳ ಹೂಡಿಕೆ ಮಾಡಲು ಅರ್ಹವಾಗಿರುತ್ತವೆ.

6: ಯಾವುದೆ ಕಾರ್ಯಚಟುವಟಿಕೆಗಳಲ್ಲಿ ಸಾಗರೋತ್ತರ ನೇರ ಬಂಡವಾಳ ಹೂಡಿಕೆ ಮಾಡಬಹುದೆ?

ಒಬ್ಬ ಭಾರತೀಯ ಪಕ್ಷಕಾರನು ಯಾವುದೆ ಪ್ರಾಮಾಣಿಕ ಉದ್ದೇಶದ ಕಾರ್ಯಚಟುವಟಿಕೆಯಲ್ಲಿ (ನಿರ್ದಿಷ್ಟವಾಗಿ ನಿಷೇಧಿಸಿದವುಗಳನ್ನು ಹೊರತುಪಡಿಸಿ) ಸಾಗರೋತ್ತರ ನೇರ ಬಂಡವಾಳ ಹೂಡಿಕೆ ಮಾಡಬಹುದು. ಆದರೆ, ಹಣಕಾಸಿನ ವಲಯದಲ್ಲಿ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ, ನಿಯಂತ್ರಣ 7ರಲ್ಲಿ ನಿರ್ದಿಷ್ಟಪಡಿಸಿರುವ ಕೆಲವು ಹೆಚ್ಚುವರಿ ಷರತ್ತುಗಳನ್ನು ಪಾಲಿಸಬೇಕಾಗುತ್ತವೆ (ದಯವಿಟ್ಟು ಪ್ರಶ್ನೆ 26ರ ಉತ್ತರ ನೋಡಿ)

7: ಸಾಗರೋತ್ತರ ನೇರ ಬಂಡವಾಳ ಹೂಡಿಕೆಗೆ ನಿಷೇಧಿಸಲಾಗಿರುವ ಕಾರ್ಯಚಟುವಟಿಕೆಗಳಾವುವು?

ರಿಯಲ್ ಎಸ್ಟೇಟ್ ಮತ್ತು ಬ್ಯಾಂಕಿಂಗ್ ವ್ಯವಹಾರ ಇವು ಸಾಗರೋತ್ತರ ನೇರ ಬಂಡವಾಳ ಹೂಡಿಕೆಗೆ ನಿಷೇಧಿಸಲಾಗಿರುವ ವಲಯಗಳಾಗಿವೆ. ಆದರೆ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ಬ್ಯಾಂಕುಗಳು ವಿದೇಶದಲ್ಲಿ ಜಂಟಿ ಉದ್ಯಮ/ ಸಂಪೂರ್ಣ ಒಡೆತನದ ಅಧೀನ ಘಟಕಗಳನ್ನು ಸ್ಥಾಪಿಸಬಹುದು. ಆದರೆ, ಅವು ಬ್ಯಾಂಕಿಂಗ್ ವಿನಿಯಮನ ಅಧಿನಿಯಮ 1949ರ ಅಡಿಯಲ್ಲಿ ಡಿಬಿಒಡಿ.ಆರ್‌ಬಿಐ.ಸಿಓ ದಿಂದ ಅನುಮತಿಯನ್ನು ಪಡೆದುಕೊಳ್ಳಬೇಕು.

8: ರಿಯಲ್ ಎಸ್ಟೇಟ್ ವ್ಯವಹಾರ ಎಂಬ ಪದದಲ್ಲಿ ನಿಖರವಾಗಿ ಏನೇನು ಒಳಗೊಂಡಿದೆ?

ರಿಯಲ್ ಎಸ್ಟೇಟ್ ವ್ಯವಹಾರ ಎಂದರೆ, ಆಸ್ತಿ ಸಂಪತ್ತನ್ನು ಕೊಳ್ಳುವುದು ಮತ್ತು ಮಾರಾಟ ಮಾಡುವುದು ಅಥವಾ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳಲ್ಲಿನ ವ್ಯಾಪಾರ. ಆದರೆ ಉಪನಗರ ಅಭಿವೃದ್ಧಿ, ನಿವಾಸ/ ವಾಣಿಜ್ಯ ಕಟ್ಟಡಗಳು, ರಸ್ತೆಗಳು ಹಾಗೂ ಸೇತುವೆಗಳ ನಿರ್ಮಾಣ ಒಳಗೊಳ್ಳುವುದಿಲ್ಲ.

9: ಒಂದು ಅರ್ಹ ಸಂಸ್ಥೆಯು ಯಾವ ಯೋಜನೆಗಳ ಅಡಿಯಲ್ಲಿ ವಿದೇಶದಲ್ಲಿ ಜಂಟಿ ಉದ್ಯಮವನ್ನು ಅಥವಾ ಸಂಪೂರ್ಣ ಒಡೆತನದ ಅಧೀನ ಘಟಕವನ್ನು ಸ್ಥಾಪಿಸಬಹುದು?

ಒಬ್ಬ ಭಾರತೀಯ ಪಕ್ಷಕಾರನು ಸ್ಥೂಲವಾಗಿ ಎರಡು ಯೋಜನೆಗಳ ಅಡಿಯಲ್ಲಿ ವಿದೇಶದಲ್ಲಿ ಜಂಟಿ ಉದ್ಯಮವನ್ನು/ ಸಂಪೂರ್ಣ ಒಡೆತನದ ಅಧೀನ ಘಟಕವನ್ನು ಸ್ಥಾಪಿಸಬಹುದು. ಒಂದು, ಸ್ವಯಂ ಚಾಲಿತ ಮಾರ್ಗ ಎರಡು ಸಾಮಾನ್ಯ ಮಾರ್ಗ.

10: ಸ್ವಯಂಚಾಲಿತ ಮಾರ್ಗ ಎಂದರೇನು ?

ಸ್ವಯಂಚಾಲಿತ ಮಾರ್ಗದಲ್ಲಿ ಭಾರತೀಯ ಪಕ್ಷಕಾರನು ವಿದೇಶದಲ್ಲಿ ಜಂಟಿ ಉದ್ಯಮವನ್ನು/ ಸಂಪೂರ್ಣ ಒಡೆತನದ ಅಧೀನ ಘಟಕವನ್ನು ಸ್ಥಾಪಿಸುವುದಕ್ಕೆ ರಿಸರ್ವ್‌ಬ್ಯಾಂಕಿನಿಂದ ಯಾವುದೇ ಪೂರ್ವ ಅನುಮೋದನೆ ಪಡೆಯುವುದು ಅಗತ್ಯವಿಲ್ಲ (ಹಣಕಾಸಿನ ವಲಯದಲ್ಲಿ ಬಂಡವಾಳ ಹೂಡುವ ಸಂದರ್ಭದಲ್ಲಿ, ಭಾರತ ಹಾಗೂ ವಿದೇಶ ಎರಡೂ ಕಡೆ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರದಿಂದ ಪೂರ್ವ ಅನುಮೋದನೆ ಪಡೆಯುವುದು ಅಗತ್ಯವಾಗಿರುತ್ತದೆ)

11: ಸ್ವಯಂಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡಿಕೆ ಮಾಡುವುದಕ್ಕೆ ಮಾನದಂಡ ಯಾವುದು?

ಸ್ವಯಂಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡುವುದಕ್ಕೆ ಸಂಬಂಧಿಸಿದ ಮಾನದಂಡ ಈ ಮುಂದಿನಂತಿದೆ:

i. ನೇಪಾಳ, ಭೂತಾನ್, ಪಾಕಿಸ್ತಾನ ದೇಶವನ್ನು ಹೊರತುಪಡಿಸಿ ಯಾವುದೆ ದೇಶದಲ್ಲಿನ ಜಂಟಿ ಉದ್ಯಮದಲ್ಲಿ/ ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ಒಟ್ಟು ಹಣಕಾಸಿನ ಭಾರತೀಯ ಪಕ್ಷಕಾರನ/ ವ್ಯಕ್ತಿಯ ಬದ್ಧತೆಯು ಅದರ ನಿವ್ವಳ ಮೌಲ್ಯದ ಶೇಕಡಾ 100 ರವರೆಗೆ ಇರುತ್ತದೆ ಮತ್ತು ಬಂಡವಾಳ ಹೂಡಿಕೆಯು ಆತಿಥೇಯ ದೇಶವು ಅನುಮತಿಸಿದ ಕಾನೂನುಬದ್ಧ ಕಾರ್ಯಚಟುವಟಿಕೆಗಳಲ್ಲಿ ಮಾಡಿದ್ದಾಗಿರುತ್ತದೆ.

ii. ಭಾರತೀಯ ಪಕ್ಷಕಾರನು, ರಿಸರ್ವ್‌ಬ್ಯಾಂಕಿನ ರಫ್ತುಗಾರರ ಎಚ್ಚರಿಕೆ ಪಟ್ಟಿಯಲ್ಲಿ/ ಭಾರತೀಯ ಸಾಲ ಮಾಹಿತಿ ಕೇಂದ್ರ ನಿಯಮಿತ (cibil)/ಆರ್‌ಬಿಐ ಪ್ರಕಟಿಸಿದ/ಪರಿಚಯಿಸಿದ ಬ್ಯಾಂಕಿಂಗ್ ವ್ಯವಸ್ಥೆಯ ಸುಸ್ತಿದಾರರ ಪಟ್ಟಿಯಲ್ಲಿ ಸೇರಿರಬಾರದು ಅಥವಾ ಜಾರಿ ನಿರ್ದೇಶನಾಲಯದಿಂದ ಅಥವಾ ಯಾವುದೇ ತನಿಖಾ ಏಜೆನ್ಸಿ ಅಥವಾ ನಿಯಂತ್ರಣ ಪ್ರಾಧಿಕಾರದಿಂದ ತನಿಖೆಯನ್ನು ಎದುರಿಸುತ್ತಿರಬಾರದು.

iii. ಭಾರತೀಯ ಪಕ್ಷಕಾರನು ಜಂಟಿ ಉದ್ಯಮದಲ್ಲಿ/ ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನು ಅದು ಗೊತ್ತುಪಡಿಸುವ ಅಧಿಕೃತ ವ್ಯಾಪಾರಿಯ ಒಂದೇ ಒಂದು ಶಾಖೆಯ ಮೂಲಕ ನಡೆಸಬೇಕು.

12: ಹಣಕಾಸಿನ ಬದ್ಧತೆ ಎಂದರೇನು?

ಹಣಕಾಸಿನ ಬದ್ಧತೆ ಎಂದರೆ ಈಕ್ವಿಟಿಗೆ ವಂತಿಗೆ ಹಾಗೂ ಸಾಲಗಳ ರೂಪದಲ್ಲಿ ಭಾರತದ ಹೊರಗೆ ನೇರ ಬಂಡವಾಳ ಹೂಡಿಕೆ ಮೊತ್ತ ಮತ್ತು ಭಾರತೀಯ ಪಕ್ಷಕಾರನು ತನ್ನ ಸಾಗರೋತ್ತರ ಜಂಟಿ ಉದ್ಯಮಕ್ಕೆ/ ಸಂಪೂರ್ಣ ಒಡೆತನದ ಅಧೀನ ಘಟಕಕ್ಕೆ ಅಥವಾ ಅದರ ಪರವಾಗಿ ನೀಡಲಾದ ಖಾತ್ರಿಯ ಮೊಬಲಗಿನ ಶೇಕಡಾ 50ರಷ್ಟು ಮೊತ್ತ.

13: ಸ್ವಯಂಚಾಲಿತ ಮಾರ್ಗದಲ್ಲಿ ನೇಪಾಳ ಅಥವಾ ಭೂತಾನ್‌ನಲ್ಲಿ ನೇರ ಬಂಡವಾಳ ಹೂಡಿಕೆಗೆ ಇರುವ ಮಿತಿ ಏನು?

ನೇಪಾಳ ಅಥವಾ ಭೂತಾನ್‌ದಲ್ಲಿ ನೇರ ಬಂಡವಾಳ ಹೂಡಿಕೆ ಸಂಬಂಧದಲ್ಲಿ ಒಟ್ಟು ಹಣಕಾಸಿನ ಬದ್ಧತೆಯು ಭಾರತೀಯ ರೂಪಾಯಿಯಲ್ಲಿ ಭಾರತೀಯ ಪಕ್ಷಕಾರನ ನಿವ್ವಳ ಮೌಲ್ಯದವರೆಗೆ ಇರುತ್ತದೆ.

14: ವಾರ್ಷಿಕ ಆಧಾರದ ಮೇಲೆ ನಿವ್ವಳ ಆದಾಯದ ಮಿತಿಯಲ್ಲಿ ಬಂಡವಾಳ ಹೂಡಿಕೆ ಮಾಡಬಹುದೇ?

ಇಲ್ಲ, ಸಾಗರೋತ್ತರ ನೇರ ಬಂಡವಾಳ ಹೂಡಿಕೆಗಾಗಿ ನಿವ್ವಳ ಮೌಲ್ಯವು ಒಟ್ಟಾರೆ ಗರಿಷ್ಠ ಮಿತಿಯಾಗಿರುತ್ತದೆ. ನಿವ್ವಳ ಮೌಲ್ಯದ ಆಧಾರದ ಮೇಲೆ ಮಾತ್ರ ಯಾವುದೆ ಹೊಸ ಸಾಗರೋತ್ತರ ಬಂಡವಾಳ ಹೂಡಿಕೆಯನ್ನು ಮಾಡಬಹುದು.

15: ಸ್ವಯಂಚಾಲಿತ ಮಾರ್ಗದಲ್ಲಿ ಜಂಟಿ ಉದ್ಯಮದಲ್ಲಿ /ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ನೇರ ಬಂಡವಾಳ ಹೂಡಿಕೆ ಮಾಡುವುದಕ್ಕೆ ಒಂದು ಅರ್ಹ ಸಂಸ್ಥೆಯು ಅನುಸರಿಸಬೇಕಾದ ಕಾರ್ಯವಿಧಾನ ಯಾವುದು?

ಸ್ವಯಂಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡಿಕೆ ಮಾಡುವುದಕ್ಕೆ ಉದ್ದೇಶಿಸುವ ಅರ್ಹ ಭಾರತೀಯ ಪಕ್ಷಕಾರನು ಬಂಡವಾಳ ಹೂಡಿಕೆ/ಹಣರವಾನೆ ಮಾಡುವುದಕ್ಕಾಗಿ 'ಒಡಿಎ' ನಮೂನೆಯನ್ನು ಭರ್ತಿ ಮಾಡಿ ಸಮರ್ಥನೆಯಾಗಿ ಅದರಲ್ಲಿ ಸೂಚಿಸಲಾಗಿರುವ ದಸ್ತಾವೇಜುಗಳನ್ನು ಎಂದರೆ, ಮಂಡಳಿ ಠರಾವಿನ ದೃಢೀಕೃತ ಪ್ರತಿ, ಕಾನೂನು ಬದ್ಧ ಲೆಕ್ಕ ಪರಿಶೋಧಕನ ಪ್ರಮಾಣಪತ್ರ, ಮೌಲ್ಯಮಾಪನ ವರದಿ (ಅಸ್ತಿತ್ವದಲ್ಲಿರುವ ಕಂಪನಿಯ ಆರ್ಜನೆಯ ಸಂದರ್ಭದಲ್ಲಿ) ಇವುಗಳನ್ನು ಪ್ರಶ್ನೆ 16ರ ಉತ್ತರದಲ್ಲಿ ಪಟ್ಟಿ ಮಾಡಲಾಗಿರುವ ಮೌಲ್ಯಮಾಪನ ಸೂತ್ರಗಳಿಗನುಸಾರವಾಗಿ ಲಗತ್ತಿಸಬೇಕು ಮತ್ತು ಬಂಡವಾಳ ಹೂಡುವುದಕ್ಕೆ/ ಹಣ ರವಾನೆ ಮಾಡುವುದಕ್ಕೆ ಅಧಿಕೃತ ವ್ಯಾಪಾರಿ (ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿ) ಯನ್ನು ಸಂಪರ್ಕಿಸಬೇಕು.

16: ಪ್ರಶ್ನೆ 4 ಮತ್ತು 15ರಲ್ಲಿ ಉಲ್ಲೇಖಿಸಲಾದ ಮೌಲ್ಯಮಾಪನದ ಸೂತ್ರಗಳಾವುವು?

ಬಂಡವಾಳ ಹೂಡಿಕೆಯು ಐದು ದಶಲಕ್ಷ ಅಮೇರಿಕನ್ ಡಾಲರ್‌ಗಿಂತ ಹೆಚ್ಚಾಗಿರುವಲ್ಲಿ ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿಯಲ್ಲಿ (SEBI) ಹೆಸರು ನೋಂದಾಯಿಸಿಕೊಂಡಿರುವ 1ನೇ ದರ್ಜೆಯ ವ್ಯಾಪಾರಿ ಬ್ಯಾಂಕರ್‌ನಿಂದ ಅಥವಾ ಆತಿಥೇಯ ದೇಶದಲ್ಲಿನ ಯುಕ್ತ ನಿಯಂತ್ರಣ ಪ್ರಾಧಿಕಾರದಲ್ಲಿ ಹೆಸರು ನೋಂದಾಯಿಸಿಕೊಂಡಿರುವ ಭಾರತದ ಹೊರಗಡೆಯ ಬಂಡವಾಳ ಹೂಡಿಕೆ ಬ್ಯಾಂಕರ್‌ನಿಂದ/ವ್ಯಾಪಾರಿ ಬ್ಯಾಂಕರ್‌ನಿಂದ ಮೌಲ್ಯಮಾಪನ ಮಾಡಿಸಬೇಕು ಮತ್ತು ಇತರ ಸಂದರ್ಭಗಳಲ್ಲಿ ಚಾರ್ಟರ್ಡ್ ಅಕೌಂಟೆಂಟ್/ಪ್ರಮಾಣಿತ ಸರ್ಕಾರಿ ಅಕೌಂಟೆಂಟ್‌ನಿಂದ ಮೌಲ್ಯಮಾಪನ ಮಾಡಿಸಬೇಕು. ಆದರೆ, ಷೇರುಗಳ ಆರ್ಜನೆಯ ಮೂಲಕ ಬಂಡವಾಳ ಹೂಡುವ ಸಂದರ್ಭದಲ್ಲಿ ಭಾರತೀಯ ಪಕ್ಷಕಾರನ ಷೇರುಗಳನ್ನು ನೀಡುವುದರ (ವಿನಿಮಯ) ಮೂಲಕ ಪ್ರತಿಫಲವನ್ನು ಪೂರ್ಣವಾಗಿ ಅಥವಾ ಭಾಗಶಃ ಸಂದಾಯ ಮಾಡಬೇಕು. ಎಲ್ಲಾ ಪ್ರಕರಣಗಳಲ್ಲಿ ಭಾರತದ ಭದ್ರತೆಗಳ ಮತ್ತು ವಿನಿಮಯ ಮಂಡಲಿಯಲ್ಲಿ (SEBI) ನೋಂದಾಯಿಸಿಕೊಂಡ 1ನೇ ದರ್ಜೆಯ ವ್ಯಾಪಾರಿ ಬ್ಯಾಂಕರ್‌ನಿಂದ ಅಥವಾ ಆತಿಥ್ಯ ದೇಶದಲ್ಲಿನ ಸಮುಚಿತ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡ ಬಂಡವಾಳ ಹೂಡಿಕೆ ಬ್ಯಾಂಕರ್/ ವ್ಯಾಪಾರಿ ಬ್ಯಾಂಕರ್‌ನಿಂದ ಮೌಲ್ಯಮಾಪನ ಮಾಡಿಸಬೇಕಾಗುತ್ತದೆ.

17: ಒಡಿಎ ನಮೂನೆ ಎಲ್ಲಿ ದೊರೆಯುತ್ತದೆ?

ಒಡಿಎ ನಮೂನೆ ಹಾಗೂ ಸಾಗರೋತ್ತರ ನೇರ ಬಂಡವಾಳ ಹೂಡಿಕೆಗೆ ಸಂಬಂಧಪಟ್ಟ ಇತರೆ ನಮೂನೆಗಳು ವೆಬ್‌ಸೈಟ್ fema.rbi.org.in ನಲ್ಲಿ ದೊರೆಯುತ್ತವೆ.

18: ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಯ ಪರಿಕಲ್ಪನೆ ಎಂದರೇನು ? ಜಂಟಿ ಉದ್ಯಮವು / ಸಂಪೂರ್ಣ ಒಡೆತನದ ಅಧೀನ ಘಟಕವು ಒಬ್ಬರಿಗಿಂತ ಹೆಚ್ಚು ಭಾರತೀಯ ಪ್ರವರ್ತಕರುಗಳನ್ನು ಹೊಂದಿರುವ ಸಂದರ್ಭದಲ್ಲಿ, ಅದೇ ಜಂಟಿ ಉದ್ಯಮಕ್ಕೆ/ ಸಂಪೂರ್ಣ ಒಡೆತನದ ಅಧೀನ ಘಟಕಕ್ಕೆ ಒಬ್ಬರಿಗಿಂತ ಹೆಚ್ಚಿನ ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಗಳಿರಬಹುದೇ?

ಭಾರತೀಯ ಪಕ್ಷಕಾರನು ವಿಶೇಷವಾಗಿ ಒಂದು ಸಾಗರೋತ್ತರ ಜಂಟಿ ಉದ್ಯಮದ /ಸಂಪೂರ್ಣ ಒಡೆತನದ ಅಧೀನ ಘಟಕದ ಸಂಬಂಧದಲ್ಲಿನ ಎಲ್ಲಾ ವ್ಯವಹಾರಗಳನ್ನು ಒಬ್ಬ ಅಧಿಕೃತ ವ್ಯಾಪಾರಿಯ ಒಂದೇ ಶಾಖೆಯ ಮೂಲಕ ನಡೆಸಬೇಕಾಗುತ್ತದೆ. ಈ ಶಾಖೆಯು ಆ ಜಂಟಿ ಉದ್ಯಮಕ್ಕೆ /ಸಂಪೂರ್ಣ ಒಡೆತನದ ಅಧೀನ ಘಟಕಕ್ಕೆ ಸಂಬಂಧಿಸಿದಂತೆ ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಯಾಗಿರುತ್ತದೆ ಮತ್ತು ಆ ನಿರ್ದಿಷ್ಟ ಜಂಟಿ ಉದ್ಯಮದಲ್ಲಿ ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ಬಂಡವಾಳ ಹೂಡುವುದಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳನ್ನು ಅಧಿಕೃತ ವ್ಯಾಪಾರಿಯ ಈ ಗೊತ್ತುಪಡಿಸಿದ ಶಾಖೆಯ ಮೂಲಕ ವರದಿ ಮಾಡಬೇಕಾಗುತ್ತದೆ. ಇಬ್ಬರು ಅಥವಾ ಹೆಚ್ಚಿನ ಭಾರತೀಯ ಪ್ರವರ್ತಕರು ವಿದೇಶದಲ್ಲಿ ಒಂದು ಜಂಟಿ ಉದ್ಯಮವನ್ನು/ ಸಂಪೂರ್ಣ ಒಡೆತನದ ಅಧೀನ

ಘಟಕವನ್ನು ಸ್ಥಾಪಿಸುತ್ತಿರುವ ಸಂದರ್ಭದಲ್ಲಿ ಆ ಎಲ್ಲಾ ಭಾರತೀಯ ಪ್ರವರ್ತಕರುಗಳನ್ನು ಸಾಮೂಹಿಕವಾಗಿ ಭಾರತೀಯ ಪಕ್ಷಕಾರರೆಂದು ಕರೆಯಲಾಗುತ್ತದೆ ಮತ್ತು ಅವರು ಆ ಜಂಟಿ ಉದ್ಯಮದ/ ಸಂಪೂರ್ಣ ಒಡೆತನದ ಅಧೀನ ಘಟಕದ ಸಂಬಂಧದಲ್ಲಿನ ಎಲ್ಲಾ ವ್ಯವಹಾರಗಳನ್ನು ಒಬ್ಬ ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಯ ಮೂಲಕ ಮಾತ್ರವೇ ನಡೆಸಬೇಕಾಗುತ್ತದೆ.

19: ಒಬ್ಬ ಭಾರತೀಯ ಪ್ರವರ್ತಕನು ಒಂದೇ ದೇಶದಲ್ಲಿ ಅಥವಾ ಬೇರೆ ಬೇರೆ ದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಜಂಟಿ ಉದ್ಯಮವನ್ನು ಹೊಂದಿದ್ದರೆ ಹೇಗೆ?

ಭಾರತೀಯ ಪ್ರವರ್ತಕರು ತಮ್ಮ ಪ್ರತ್ಯೇಕ ಜಂಟಿ ಉದ್ಯಮಗಳಿಗೆ/ ಸಂಪೂರ್ಣ ಒಡೆತನದ ಅಧೀನ ಘಟಕಗಳಿಗೆ ಒಂದೇ ಅಧಿಕೃತ ವ್ಯಾಪಾರಿಯ ಬೇರೆ ಬೇರೆ ಶಾಖೆಗಳನ್ನು ಗೊತ್ತುಪಡಿಸುವುದಕ್ಕೆ ಅಥವಾ ಬೇರೆ ಬೇರೆ ಅಧಿಕೃತ ವ್ಯಾಪಾರಿಗಳ ಬೇರೆ ಬೇರೆ ಶಾಖೆಗಳನ್ನು ಗೊತ್ತುಪಡಿಸುವುದಕ್ಕೆ ಸ್ವತಂತ್ರರಾಗಿರುತ್ತಾರೆ. ಪ್ರವರ್ತಕರ ಸಂಖ್ಯೆ ಎಷ್ಟೇ ಆಗಿದ್ದರೂ ಒಂದು ಜಂಟಿ ಉದ್ಯಮವು /ಸಂಪೂರ್ಣ ಒಡೆತನದ ಅಧೀನ ಘಟಕವು ಅದರ ಎಲ್ಲಾ ವಹಿವಾಟುಗಳನ್ನು ವರದಿ ಮಾಡುವುದಕ್ಕೆ ಒಬ್ಬ ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಯನ್ನು ಮಾತ್ರ ಹೊಂದಿರಬೇಕು ಎಂಬುದು ಏಕೈಕ ಅಗತ್ಯವಾಗಿದೆ.

20: ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಯನ್ನು ಬದಲಾವಣೆ ಮಾಡಬಹುದೇ?

ಮಾಡಬಹುದು, ಅದಕ್ಕಾಗಿ, ಪತ್ರದ ರೂಪದಲ್ಲಿ ಒಂದು ಅರ್ಜಿಯನ್ನು ಸಂಬಂಧಪಟ್ಟ ರಿಸರ್ವ್‌ಬ್ಯಾಂಕಿನ ಪ್ರಾದೇಶಿಕ ಕಚೇರಿಗೆ ಸಲ್ಲಿಸಬಹುದು.

21: ಸ್ವಯಂಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡಿಕೆಗಳಿಗೆ ರಿಸರ್ವ್ ಬ್ಯಾಂಕಿನಲ್ಲಿ ಯಾವುದೆ ಪೂರ್ವ ನೋಂದಣಿ ಅವಶ್ಯವಿದೆಯೇ?

ಸ್ವಯಂಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡಿಕೆಗಳಿಗೆ ರಿಸರ್ವ್‌ಬ್ಯಾಂಕಿನಲ್ಲಿ ಯಾವುದೆ ಪೂರ್ವ ನೋಂದಣಿ ಮಾಡಿಸುವ ಅಗತ್ಯವಿಲ್ಲ. ರಿಸರ್ವ್ ಬ್ಯಾಂಕ್ ಗೊತ್ತುಪಡಿಸಿದ ಅಧಿಕೃತ ವ್ಯಾಪಾರಿಯಿಂದ ಒಡಿಆರ್ ನಮೂನೆಯಲ್ಲಿ ಹಣರವಾನೆ/ ಬಂಡವಾಳ ಹೂಡಿಕೆ ವರದಿಯನ್ನು ಸ್ವೀಕರಿಸಿದ ತರುವಾಯ ಸಾಗರೋತ್ತರ ಸಂಸ್ಥೆಗಳ ಸಂಬಂಧದಲ್ಲಿ ಹೊರ ಹೋಗುವ/ ಒಳ ಬರುವ ಹಣದ ಮೇಲ್ವಿಚಾರಣೆ ಮಾಡುವುದಕ್ಕಾಗಿ ಡಾಟಾಬೇಸ್ ಅನ್ನು ನಿರ್ವಹಿಸುವ ಉದ್ದೇಶದಿಂದ ಸಾಗರೋತ್ತರ ನೇರ ಬಂಡವಾಳ ಹೂಡಿಕೆಯನ್ನು ದಾಖಲೆಗೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಆ ನಿರ್ದಿಷ್ಟ ಜಂಟಿ ಉದ್ಯಮಕ್ಕೆ ಒಂದು ಸಂಪೂರ್ಣ ಒಡೆತನದ ಅಧೀನ ಘಟಕಕ್ಕೆ ಒಂದು ಗುರುತಿನ ಸಂಖ್ಯೆಯನ್ನು ನೀಡಲಾಗುತ್ತದೆ. ಅದೇ ಯೋಜನೆಯಲ್ಲಿನ ತರುವಾಯದ ಬಂಡವಾಳ ಹೂಡಿಕೆಗಳನ್ನು ಗುರುತಿನ ಸಂಖ್ಯೆಯನ್ನು ಹಂಚಿಕೆ ಮಾಡಿದ ತರುವಾಯ ಮಾತ್ರವೇ ಮಾಡಬೇಕಾಗುತ್ತದೆ.

22: ಸ್ವಯಂ ಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡಿಕೆಗಳಿಗೆ ರಿಸರ್ವ್ ಬ್ಯಾಂಕ್ ಮಾಡುವ ಗುರುತಿನ ಸಂಖ್ಯೆಯ ಹಂಚಿಕೆಯು ರಿಸರ್ವ್ ಬ್ಯಾಂಕಿನ ಅನುಮೋದನೆಯನ್ನು ಸೂಚಿಸುತ್ತದೆಯೇ?

ಇಲ್ಲ, ಯಾವುದೇ ಒಂದು ಜಂಟಿ ಉದ್ಯಮದಲ್ಲಿ /ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ಮಾಡಿದ/ ಮಾಡಲಾಗುವ ಬಂಡವಾಳ ಹೂಡಿಕೆಗಾಗಿ ರಿಸರ್ವ್ ಬ್ಯಾಂಕಿನಿಂದ ನೀಡಲಾಗುವ ಗುರುತಿನ ಸಂಖ್ಯೆಯ ಹಂಚಿಕೆಯು ಅದರ ಅನುಮೋದನೆಯಾಗುವುದಿಲ್ಲ. ಗುರುತಿನ ಸಂಖ್ಯೆಯ ನೀಡಿಕೆಯು ಕೇವಲ ಡಾಟಾಬೇಸ್ ನಿರ್ವಹಣೆಗಾಗಿ ಬಂಡವಾಳ ಹೂಡಿಕೆಯನ್ನು ದಾಖಲೆಗೆ ತೆಗೆದುಕೊಳ್ಳುವುದನ್ನು ಸೂಚಿಸುತ್ತದೆ.

23: ಸ್ವಯಂಚಾಲಿತ ಮಾರ್ಗದಲ್ಲಿ ನೇರ ಬಂಡವಾಳ ಹೂಡಿಕೆಗೆ ಯಾವುದೇ ನಿಷೇಧವಿದೆಯೇ?

ಹೌದು, ಜಾರಿ ನಿರ್ದೇಶನಾಲಯದಿಂದ/ ಇತರ ತನಿಖೆ ಏಜೆನ್ಸಿಗಳಿಂದ/ ನಿಯಂತ್ರಣ ಪ್ರಾಧಿಕಾರಿಗಳಿಂದ ತನಿಖೆಯನ್ನು ಎದುರಿಸುತ್ತಿರುವ ಅಥವಾ ಭಾರತೀಯ ರಿಸರ್ವ್ ಬ್ಯಾಂಕಿನ ರಫ್ತುಗಾರರ ಎಚ್ಚರಿಕೆ ಪಟ್ಟಿಯಲ್ಲಿರುವ

ಅಥವಾ ಸಿಐಬಿಐಎಲ್/ ಆರ್‌ಬಿಐ ಯಿಂದ ಪ್ರಕಟಿಸಲಾದ/ ಪರಿಚಲನೆಗೊಳಿಸಲಾದ ಭಾರತದಲ್ಲಿನ ಬ್ಯಾಂಕಿಂಗ್ ವ್ಯವಸ್ಥೆಯ ಸುಸ್ತಿದಾರರ ಪಟ್ಟಿಯಲ್ಲಿ ಸೇರಿರುವ ಭಾರತೀಯ ಪಕ್ಷಕಾರರು ಸ್ವಯಂ ಚಾಲಿತ ಮಾರ್ಗದಲ್ಲಿ ಬಂಡವಾಳ ಹೂಡಿಕೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ.

24: ಸಾಮಾನ್ಯ ಮಾರ್ಗ ಎಂದರೇನು? ಸಾಮಾನ್ಯ ಮಾರ್ಗದಲ್ಲಿ ಬಂಡವಾಳ ಹೂಡಿಕೆಗಾಗಿ ಅನುಸರಿಸಬೇಕಾದ ಕಾರ್ಯವಿಧಾನ ಯಾವುದು?

ಸ್ವಯಂಚಾಲಿತ ಮಾರ್ಗದಲ್ಲಿ ಷರತ್ತುಗಳನ್ನು ಒಳಗೊಳ್ಳದಿರುವ ಪ್ರಸ್ತಾವನೆಗಳಿಗೆ ರಿಸರ್ವ್ ಬ್ಯಾಂಕಿನಿಂದ ಪೂರ್ವ ಅನುಮತಿ ಪಡೆಯುವುದು ಅಗತ್ಯವಾಗಿರುತ್ತದೆ. ಅದಕ್ಕಾಗಿ ಓಡಿಐ ನಮೂನೆಯಲ್ಲಿ ಒಂದು ನಿರ್ದಿಷ್ಟ ಅರ್ಜಿಯನ್ನು ಅದರಲ್ಲಿ ಗೊತ್ತುಪಡಿಸಿದ ದಸ್ತಾವೇಜುಗಳೊಂದಿಗೆ ಈ ವಿಳಾಸಕ್ಕೆ ಸಲ್ಲಿಸುವುದು ಅಗತ್ಯವಾಗಿದೆ:–

ಭಾರತೀಯ ರಿಸರ್ವ್ ಬ್ಯಾಂಕ್
ವಿದೇಶಿ ವಿನಿಮಯ ಇಲಾಖೆ,
ಸಾಗರೋತ್ತರ ಬಂಡವಾಳ ಹೂಡಿಕೆ ವಿಭಾಗ,
ಕೇಂದ್ರ ಕಚೇರಿ, ಅಮರ್ ಬಿಲ್ಡಿಂಗ್,
3ನೇ ಮಹಡಿ, ಮುಂಬೈ–400 001.

25: ಸಾಮಾನ್ಯ ಮಾರ್ಗದಲ್ಲಿ ಪ್ರಸ್ತಾವನೆಗಳ ಪರಿಗಣನೆಗೆ ಸಂಬಂಧಿಸಿದ ಮಾನದಂಡಗಳಾವುವು?

ಇತರ ವಿಷಯಗಳ ಜೊತೆಗೆ ಪ್ರಸ್ತಾವನೆಗಳ ಮೊದಲ–ನೋಟದ ಸಾಮರ್ಥ್ಯವನ್ನು, ಪ್ರವರ್ತಕರ ವ್ಯವಹಾರದ ದಾಖಲೆಯನ್ನು, ಪ್ರವರ್ತಕರ ಅನುಭವ ಹಾಗೂ ನೈಪುಣ್ಯತೆಯನ್ನು, ದೇಶಕ್ಕಾಗುವ ಪ್ರಯೋಜನಗಳನ್ನು ಗಣನೆಗೆ ತೆಗೆದುಕೊಂಡು ಸಾಮಾನ್ಯ ಮಾರ್ಗದಲ್ಲಿ ಬರುವ ಕೋರಿಕೆಗಳನ್ನು ಪರಿಗಣಿಸಲಾಗುತ್ತದೆ.

26: ಒಂದು ಭಾರತೀಯ ಕಂಪನಿಯು ಹಣಕಾಸು ಸೇವಾ ವಲಯದಲ್ಲಿ ವಿದೇಶದಲ್ಲಿನ ಒಂದು ಜಂಟಿ ಉದ್ಯಮ/ ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ಬಂಡವಾಳ ಹೂಡಬಹುದೇ?

ಹಣಕಾಸು ವಲಯದ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುವ ಯಾವುದೆ ಭಾರತೀಯ ಕಂಪನಿ ಹಣಕಾಸು ಸೇವಾ ವಲಯದಲ್ಲಿ ಬಂಡವಾಳ ಹೂಡಬಹುದು. ಆದರೆ ಅದು, ಈ ಮುಂದಿನ ಹೆಚ್ಚುವರಿ ನಿಬಂಧನೆಗಳನ್ನು ಪೂರೈಸಬೇಕಾಗುತ್ತದೆ.

i. ಹಣಕಾಸು ಸೇವಾ ಕಾರ್ಯಚಟುವಟಿಕೆಗಳಿಂದ ಹಿಂದಿನ ಮೂರು ಆರ್ಥಿಕ ವರ್ಷಗಳ ಅವಧಿಯಲ್ಲಿ ನಿವ್ವಳ ಲಾಭ ಗಳಿಸಿರಬೇಕು;
ii. ಹಣಕಾಸು ಸೇವಾ ಕಾರ್ಯಚಟುವಟಿಕೆಗಳನ್ನು ನಡೆಸುವುದಕ್ಕೆ ಭಾರತದಲ್ಲಿನ ಸಮುಚಿತ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡಿರಬೇಕು.
iii. ಅಂಥ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ, ಅಂಥ ಕಾರ್ಯಕ್ಕೆ ಕೈ ಹಾಕುವ ಮೊದಲು ಭಾರತ ಹಾಗೂ ವಿದೇಶ ಎರಡೂ ಕಡೆಗಳಲ್ಲಿನ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರಗಳಿಂದ ಅನುಮೋದನೆ ಪಡೆದುಕೊಂಡಿರಬೇಕು.
iv. ಭಾರತದಲ್ಲಿನ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರವು ಗೊತ್ತುಪಡಿಸಿರುವ ಬಂಡವಾಳದ ಪರ್ಯಾಪ್ತತೆಗೆ ಸಂಬಂಧಿಸಿದ ವಿವೇಚನಾಯುಕ್ತ ನಿಬಂಧನೆಗಳನ್ನು ಪೂರೈಸಿರಬೇಕು.

27: ಸಾಗರೋತ್ತರ ನೇರ ಬಂಡವಾಳ ಹೂಡಿಕೆಗೆ ಹಣ ಒದಗಿಸುವುದಕ್ಕೆ ಅನುಮತಿಸಬಹುದಾದ ಮೂಲಗಳಾವುವು?

ಸಾಗರೋತ್ತರ ನೇರ ಬಂಡವಾಳ ಹೂಡಿಕೆಗೆ ಈ ಮುಂದಿನ ಒಂದು ಅಥವಾ ಹೆಚ್ಚಿನ ಮೂಲಗಳಿಂದ ಹಣ ಒದಗಿಸಬಹುದು.

1. ಅಧಿಕೃತ ವ್ಯಾಪಾರಿಯ ಬಳಿ ನಿರ್ವಹಿಸಿರುವ ಭಾರತೀಯ ಪಕ್ಷಕಾರನ ವಿನಿಮಯ ಗಳಿಕೆದಾರರ ವಿದೇಶಿ ಕರೆನ್ಸಿ ಖಾತೆಯಲ್ಲಿ (ಇಇಎಸ್‌ಸಿ ಖಾತೆಯಲ್ಲಿ) ಹೊಂದಿರುವ ಶಿಲ್ಕುಗಳು;
2. ಎಡಿಆರ್ / ಜಿಡಿಆರ್ ನೀಡಿಕೆಗಳ ಹುಟ್ಟುವಳಿ;
3. ವಿದೇಶಿ ವಿನಿಮಯದ ಮಾರುಕಟ್ಟೆ ಖರೀದಿಗಳು;
4. ಷೇರು ವಿನಿಮಯ (ಭಾರತೀಯ ಸಂಸ್ಥೆಯ ಷೇರುಗಳ ವಿನಿಮಯದ ರೂಪದಲ್ಲಿ ಸಾಗರೋತ್ತರ ಸಂಸ್ಥೆಯ ಷೇರುಗಳ ಆರ್ಜನೆಯನ್ನು ಸೂಚಿಸುತ್ತದೆ);
5. ರಫ್ತುಗಳು, ರಾಜಧನಗಳು, ಮುಂತಾದವುಗಳನ್ನು ಬಂಡವಾಳೀಕರಿಸುವುದು;
6. ವಿದೇಶದಿಂದ ಎತ್ತಲಾದ ಇಸಿಬಿಗಳು/ ಎಫ್‌ಸಿಸಿಬಿಗಳ ಹುಟ್ಟುವಳಿಗಳು.

ಭಾರತೀಯ ಪಕ್ಷಕಾರನ ನಿವ್ವಳ ಮೌಲ್ಯವನ್ನು, ಅದರ ಧಾರಕ ಕಂಪನಿಯ (ಕನಿಷ್ಠ ಶೇಕಡಾ 51 ರಷ್ಟು ಷೇರನ್ನು ಹೊಂದಿರುವ) ಅಥವಾ ಅದರ ಅಧೀನ ಕಂಪನಿಯ (ಅದರಲ್ಲಿ ಭಾರತೀಯ ಪಕ್ಷಕಾರರು ಕನಿಷ್ಠ ಶೇಕಡಾ 51 ರಷ್ಟು ಷೇರನ್ನು ಹೊಂದಿರಬೇಕು) ನಿವ್ವಳ ಮೌಲ್ಯವನ್ನು ಅಂದಾಜು ಮಾಡುವ/ ಲೆಕ್ಕ ಹಾಕುವ ಉದ್ದೇಶಕ್ಕಾಗಿ ಧಾರಕ ಕಂಪನಿಯು ಅಥವಾ ಅಧೀನ ಘಟಕವು ಸ್ವತಂತ್ರವಾಗಿ ಉಪಯೋಗಿಸಿಕೊಳ್ಳದಿರುವಷ್ಟನ್ನು ಹಾಗೂ ಭಾರತೀಯ ಪಕ್ಷಕಾರನ ಪರವಾಗಿ ಕ್ಲೇಮು ಮಾಡದವನ ಪತ್ರ ಒದಗಿಸಿರುವುದನ್ನು ಗಣನೆಗೆ ತೆಗೆದುಕೊಳ್ಳಬಹುದು. ಆದರೆ, ಈ ಸೌಲಭ್ಯವು ಪಾಲುದಾರಿಕೆ ಫರ್ಮ್‌ಗಳಿಗೆ ದೊರೆಯುವುದಿಲ್ಲ ಹಾಗೂ ಪಾಲುದಾರಿಕೆ ಫರ್ಮ್‌ಗಳ ನಿವ್ವಳ ಮೌಲ್ಯವನ್ನು ನಿಗಮಿತ ಸಂಸ್ಥೆಯು ಲೆಕ್ಕಕ್ಕೆ ತೆಗೆದುಕೊಳ್ಳುವ ಹಾಗಿಲ್ಲ.

28: ಭಾರತೀಯ ಪಕ್ಷಕಾರನು ತನ್ನ ಸಾಗರೋತ್ತರ ಜಂಟಿ ಉದ್ಯಮಕ್ಕೆ/ ಸಂಪೂರ್ಣ ಒಡೆತನದ ಅಧೀನ ಘಟಕಕ್ಕೆ ಮಾಡಿದ ರಫ್ತುಗಳ ಹುಟ್ಟವಳಿಯನ್ನು ಬಂಡವಾಳೀಕರಿಸಬಹುದೇ?

ಹೌದು, ಭಾರತೀಯ ಪಕ್ಷಕಾರನು ತನ್ನ ಸಾಗರೋತ್ತರ ಜಂಟಿ ಉದ್ಯಮಕ್ಕೆ / ಸಂಪೂರ್ಣ ಒಡೆತನದ ಅಧೀನ ಘಟಕಕ್ಕೆ ರಫ್ತು ಹುಟ್ಟುವಳಿಯನ್ನು ಬಂಡವಾಳೀಕರಿಸುವುದಕ್ಕೆ ಸ್ವಯಂಚಾಲಿತ ಮಾರ್ಗದಲ್ಲಿ ಅನುಮತಿ ನೀಡಲಾಗಿದೆ. ಆದರೆ ರಫ್ತು ಹುಟ್ಟುವಳಿಯು ರಫ್ತಿನ ದಿನಾಂಕದಿಂದ ಆರು ತಿಂಗಳ ಅವಧಿಯನ್ನು ಮೀರಿ ಪ್ರಾಪ್ತವಾಗದೆ ಉಳಿಯಬಾರದು. ಅಂಥ ಹುಟ್ಟುವಳಿಯನ್ನು ರಿಸರ್ವ್ ಬ್ಯಾಂಕಿನ ಪೂರ್ವ ಅನುಮತಿಯಿಲ್ಲದೆ ಬಂಡವಾಳವನ್ನಾಗಿ ಪರಿವರ್ತಿಸತಕ್ಕದ್ದಲ್ಲ.

29: ಭಾರತೀಯ ಪಕ್ಷಕಾರನು ಒಂದು ಸಾಗರೋತ್ತರ ಸಂಸ್ಥೆಗೆ, ಆ ಸಂಸ್ಥೆಯಲ್ಲಿ ಯಾವುದೇ ಈಕ್ವಿಟಿ ಸಹಭಾಗಿತ್ವ ಇಲ್ಲದೆ, ಸಾಲವನ್ನು ಅಥವಾ ಖಾತ್ರಿಯನ್ನು ನೀಡಬಹುದೆ?

ಇಲ್ಲ, ಈಗಾಗಲೇ ನೇರ ಬಂಡವಾಳ ಹೂಡಿಕೆ ರೂಪದಲ್ಲಿ ಆ ಸಂಸ್ಥೆಯಲ್ಲಿ ಈಕ್ವಿಟಿ ಸಹಭಾಗಿತ್ವ ಇದ್ದಲ್ಲಿ ಮಾತ್ರ ಸಾಗರೋತ್ತರ ಸಂಸ್ಥೆಗೆ ಸಾಲ ಹಾಗೂ ಖಾತ್ರಿಯನ್ನು ನೀಡಬಹುದು.

30: ಭಾರತೀಯ ಕಂಪನಿಯು ಷೇರು ವಿನಿಮಯದ ರೂಪದಲ್ಲಿ ಸಾಗರೋತ್ತರ ಉದ್ದಿಮೆಯಲ್ಲಿ ನೇರ ಬಂಡವಾಳ ಹೂಡಬಹುದೆ?

ಹೂಡಬಹುದು, ಸ್ವಯಂ ಚಾಲಿತ ಮಾರ್ಗದಲ್ಲಿ ಷೇರು ವಿನಿಮಯ ವ್ಯವಸ್ಥೆ ರೂಪದಲ್ಲಿ ಭಾರತದ ಹೊರಗಡೆಯ ಜಂಟಿ ಉದ್ಯಮದಲ್ಲಿ/ ಸಂಪೂರ್ಣ ಒಡೆತನದ ಅಧೀನ ಘಟಕದಲ್ಲಿ ನೇರ ಬಂಡವಾಳ ಹೂಡಿಕೆಗಾಗಿ ಕೋರಿಕೆಗಳನ್ನು ಸಲ್ಲಿಸಬಹುದು. ಆದರೆ, ಗೊತ್ತುಪಡಿಸಲಾದ ಮೌಲ್ಯಮಾಪನ ನಿಬಂಧನೆಗಳನ್ನು ಅಂದರೆ, ಷೇರುಗಳ ಮೌಲ್ಯಮಾಪನವನ್ನು ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಲಿ (SEBI) ಯಲ್ಲಿ ನೋಂದಾಯಿಸಿಕೊಂಡ 1ನೇ ದರ್ಜೆಯ ವ್ಯಾಪಾರಿ ಬ್ಯಾಂಕರ್‌ನು ಅಥವಾ ಆತಿಥೇಯ ದೇಶದಲ್ಲಿನ ಸಮುಚಿತ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡ ಭಾರತದ ಹೊರಗಡೆಯ ಹೂಡಿಕೆ ಬ್ಯಾಂಕರ್ / ವ್ಯಾಪಾರಿ ಬ್ಯಾಂಕರರು ಮಾಡಿರಬೇಕು ಎಂಬ ನಿಬಂಧನೆಗಳನ್ನು ಪೂರೈಸಬೇಕು. ಹೂಡಿಕೆದಾರರು ಎಲ್ಲಾ ಷೇರು ವಿನಿಮಯ ವ್ಯವಹಾರಗಳಿಗೆ

ಹೂಡಿಕೆಗಳನ್ನು ಒಳಪಡಿಸುವುದಕ್ಕೆ ವಿದೇಶಿ ಬಂಡವಾಳ ಹೂಡಿಕೆ ಸಂವರ್ಧನಾ ಮಂಡಲಿಯಿಂದ ಪೂರ್ವ ಅನುಮೋದನೆ ಪಡೆಯುವುದು ಅಗತ್ಯವೆಂಬುದನ್ನು ಸಹ ಗಮನಿಸಬೇಕು.

31: ಪಾಲುದಾರಿಕೆ ಫರ್ಮ್‌ಗಳು ಸಾಗರೋತ್ತರ ನೇರ ಬಂಡವಾಳ ಹೂಡುವುದಕ್ಕೆ ಇರುವ ಯೋಜನೆಗಳಾವುವು?

ಭಾರತೀಯ ಪಾಲುದಾರಿಕೆ ಅಧಿನಿಯಮ, 1932 ರ ಅಡಿಯಲ್ಲಿ ನೋಂದಾಯಿತವಾದ ಪಾಲುದಾರಿಕೆ ಫರ್ಮ್‌ಗಳು ನಿಗಮಿತ ಸಂಸ್ಥೆಗಳಿಗೆ ಅನ್ವಯವಾಗಬಹುದಾದಂಥದೇ ಷರತ್ತುಗಳು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಸಾಗರೋತ್ತರ ನೇರ ಬಂಡವಾಳ ಹೂಡಿಕೆ ಮಾಡಬಹುದು.

32. ಪಾಲುದಾರರು ಫರ್ಮ್‌ಗಾಗಿ ಮತ್ತು ಅದರ ಪರವಾಗಿ ಸಾಗರೋತ್ತರ ಉದ್ದಿಮೆಗಳ ಷೇರುಗಳನ್ನು ಹೊಂದಬಹುದೇ?

ಆತಿಥೇಯ ರಾಷ್ಟ್ರದ ವಿನಿಯಮನಗಳು ಅಥವಾ ಪ್ರವರ್ತನಾ ಅಗತ್ಯತೆಗಳು ಅಂತಹ ಹೋಲ್ಡಿಂಗ್‌ಗೆ ಅವಕಾಶ ಕಲ್ಪಿಸಿದಲ್ಲಿ ಮಾತ್ರ ಒಂದು ಸಾಗರೋತ್ತರ ಜಂಟಿ ಉದ್ಯಮದಲ್ಲಿ/ಪೂರ್ಣ ಒಡೆತನದ ಅಧೀನ ಘಟಕದಲ್ಲಿ ಫರ್ಮ್‌ಗಾಗಿ ಮತ್ತು ಅದರ ಪರವಾಗಿ ವ್ಯಕ್ತಿಗತ ಪಾಲುದಾರರು ಷೇರುಗಳನ್ನು ಹೊಂದಿರುವುದು ಕ್ರಮಬದ್ಧವಾಗಿರುತ್ತದೆ. ಆದರೂ, ಸಾಗರೋತ್ತರ ಜೆವಿ/ಡಬ್ಲ್ಯುಒಎಸ್‌ಗೆ ನಿಧಿಯನ್ನು ಫರ್ಮ್ ಒದಗಿಸಬೇಕಾಗುತ್ತದೆ.

33. ಎರಡನೆಯ ತಲೆಮಾರಿನ ಕಂಪನಿಯ ಸ್ಥಾಪನೆಗೆ ಯಾವುದಾದರೂ ನಿರ್ಬಂಧಗಳಿವೆಯೇ? ಅಂತಹ ಕೆಳ ಹಂತದ ಅಧೀನ ಘಟಕಗಳನ್ನು ಸ್ವಯಂ ಚಾಲಿತ ಮಾರ್ಗದಲ್ಲಿ ಸ್ಥಾಪಿಸಬಹುದೆ?

ಸ್ವಯಂ ಚಾಲಿತ ಮಾರ್ಗದಲ್ಲಿ ಬಂಡವಾಳ ಹೂಡಿಕೆಗಳಿಗೆ ಅನ್ವಯವಾಗಬಹುದಾದ ಒಟ್ಟು ಪರಿಮಿತಿಗಳೊಳಗೆ ಎರಡನೆಯ ತಲೆಮಾರಿನ ಕಂಪನಿಗಳನ್ನು (ಕೆಳಹಂತದ ಘಟಕಗಳು) ಸ್ಥಾಪಿಸಲು ವಿದೇಶದಲ್ಲಿನ ಜೆವಿಗಳು/ ಡಬ್ಲ್ಯುಒಎಸ್‌ಗಳನ್ನು ಹೊಂದಿರುವ ಸಂಸ್ಥೆಗಳ ಮೇಲೆ ಯಾವುದೆ ನಿರ್ಬಂಧಗಳಿರುವುದಿಲ್ಲ. ಆದರೂ, ಆರ್ಥಿಕ ವಲಯದ ಕಾರ್ಯ ಚಟುವಟಿಕೆಗಳನ್ನು ನಡೆಸಲು ಕೆಳ ಹಂತದ ಅಧೀನ ಘಟಕಗಳನ್ನು ಸ್ಥಾಪಿಸಲು ಇಚ್ಛಿಸುವ ಕಂಪನಿಗಳು ಆರ್ಥಿಕ ವಲಯದಲ್ಲಿ ನೇರ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ಹೆಚ್ಚುವರಿ ಅಗತ್ಯತೆಗಳನ್ನು ಪೂರೈಸಬೇಕಾಗುತ್ತದೆ.

34. ಭಾರತೀಯ ಪಕ್ಷಕಾರನು ಸ್ವಯಂ ಚಾಲಿತ ಮಾರ್ಗದಲ್ಲಿ ವಿಶೇಷ ಉದ್ದೇಶ ವಾಹಕ (ಎಸ್‌ಪಿವಿ)ದ ಮೂಲಕ ಜೆವಿ/ಡಬ್ಲ್ಯುಒಎಸ್ ಅನ್ನು ಹೊಂದಬಹುದೇ?

ಹೌದು. ಸ್ವಯಂ ಚಾಲಿತ ಮಾರ್ಗದಲ್ಲಿ ವಿಶೇಷ ಉದ್ದೇಶ ವಾಹಕದ ಮಾಧ್ಯಮದ ಮುಖಾಂತರ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡಲಾಗಿದೆ.

35. ಭಾರತೀಯ ಪಕ್ಷಕಾರನು ಅಂತಹ ಅಧೀನ ಘಟಕಗಳಿಗೆ ನೇರವಾಗಿ ಹಣಕಾಸು ನೆರವು ನೀಡಬಹುದೇ?

ಜೆವಿ/ಡಬ್ಲ್ಯುಒಎಸ್ ಅನ್ನು ವಿಶೇಷ ಉದ್ದೇಶ ವಾಹಕದ ಮುಖಾಂತರ ಸ್ಥಾಪಿಸಲಾಗಿದ್ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀನ ಘಟಕಕ್ಕೆ ಎಲ್ಲಾ ಹಣಕಾಸು ನೆರವನ್ನು ವಿಶೇಷ ಉದ್ದೇಶ ವಾಹಕದ ಮುಖಾಂತರವಾಗಿ ಮಾತ್ರವೇ ಮಾಡತಕ್ಕದ್ದು. ಆದರೆ, ಕೆಳ ಹಂತದ ಅಧೀನ ಘಟಕಗಳಿಗೆ ಖಾತರಿಗಳನ್ನು ನೀಡಬೇಕಾದ ಸಂದರ್ಭದಲ್ಲಿ, ಇವುಗಳನ್ನು ಭಾರತೀಯ ಪಕ್ಷಕಾರನು ನೇರವಾಗಿ ನೀಡಬಹುದು. ಆದರೆ ಅಂತಹ ಖಾತರಿಗಳು ಭಾರತೀಯ ಪಕ್ಷಕಾರನ ಅನುಮತೀಯವಾದ ಆರ್ಥಿಕ ಬದ್ಧತೆಯ ಪರಿಮಿತಿಯೊಳಗಿರಬೇಕು.

36. ವಿದೇಶದಲ್ಲಿನ ಜೆವಿ/ಡಬ್ಲ್ಯುಓಎಸ್‌ನ ಷೇರುಗಳನ್ನು ಹಣಕಾಸು ನೆರವಿನ ಉದ್ದೇಶಕ್ಕಾಗಿ ಒತ್ತೆ ಇಡಬಹುದೇ?

ಜೆವಿ/ಡಬ್ಲ್ಯುಓಎಸ್‌ನ ಷೇರುಗಳನ್ನು ಭಾರತದಲ್ಲಿನ ಅಧಿಕೃತ ವ್ಯಾಪಾರಿಯಿಂದ/ಸಾರ್ವಜನಿಕ ಹಣಕಾಸು ಸಂಸ್ಥೆಯಿಂದ ಸಂಬಂಧಪಟ್ಟ ಸಂಸ್ಥೆಗಾಗಿ ಅಥವಾ ಜೆವಿ/ಡಬ್ಲ್ಯುಓಎಸ್‌ಗಾಗಿ ನಿಧಿ ಆಧಾರಿತ ಅಥವಾ ನಿಧಿ ಆಧಾರಿತವಲ್ಲದ ಸೌಲಭ್ಯವನ್ನು ಪಡೆಯುವುದಕ್ಕಾಗಿ ಭದ್ರತೆಯಾಗಿ ಒತ್ತೆ ಇಡಬಹುದು.

37. ಭಾರತದ ಹೊರಗಡೆ ನೇರ ಬಂಡವಾಳ ಹೂಡುವಂತಹ ಭಾರತೀಯ ಪಕ್ಷಕಾರನ ಬಾಧ್ಯತೆಗಳೇನು?

ಭಾರತೀಯ ಪಕ್ಷಕಾರನು ಈ ಮುಂದಿನವುಗಳನ್ನು ಪಾಲಿಸಬೇಕು:

i. ರಿಸರ್ವ್ ಬ್ಯಾಂಕ್‌ಗೆ ಮನವರಿಕೆ ಮಾಡಿಕೊಡುವುದಕ್ಕಾಗಿ ವಿದೇಶಿ ಸಂಸ್ಥೆಯಲ್ಲಿ ಬಂಡವಾಳ ಹೂಡಿರುವ ಬಗ್ಗೆ ಷೇರು ಪ್ರಮಾಣಪತ್ರಗಳನ್ನು ಅಥವಾ ಇತರ ಯಾವುದೇ ದಸ್ತಾವೇಜೀಯ ಸಾಕ್ಷ್ಯವನ್ನು ಆರು ತಿಂಗಳುಗಳ ಒಳಗಾಗಿ ಪಡೆಯುವುದು. ಇದಕ್ಕೆ ತಪ್ಪಿದಲ್ಲಿ ಅವುಗಳನ್ನು ಪಡೆಯದಿರುವುದಕ್ಕೆ ಕಾರಣಗಳನ್ನು ಸೂಚಿಸಿ ಕಾಲಾವಕಾಶದ ವಿಸ್ತರಣೆಗಾಗಿ ಅರ್ಜಿಯನ್ನು ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸಬೇಕಾಗುತ್ತದೆ.

ii. ಲಾಭಾಂಶ, ರಾಜಧನ, ತಾಂತ್ರಿಕ ಶುಲ್ಕಗಳು ಮೊದಲಾದಂಥ ವಿದೇಶಿ ಸಂಸ್ಥೆಯಿಂದ ಪಡೆಯಬಹುದಾದ ಎಲ್ಲಾ ಬಾಕಿಗಳನ್ನು ಅವುಗಳನ್ನು ಪಡೆಯಬೇಕಾಗಿದ್ದ ದಿನಾಂಕದಿಂದ 60 ದಿವಸಗಳ ಒಳಗಾಗಿ ಅಥವಾ ರಿಸರ್ವ್ ಬ್ಯಾಂಕ್ ಅನುಮತಿಸಬಹುದಾದಂತಹ ಹೆಚ್ಚಿನ ಅವಧಿಯೊಳಗಾಗಿ ಭಾರತಕ್ಕೆ ಮರಳಿ ಕಳುಹಿಸುವುದು.

iii. ಭಾರತದ ಹೊರಗಡೆಯ ಜೆವಿ/ಡಬ್ಲ್ಯುಓಎಸ್‌ನ ಪರಿಶೋಧಿತ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವುದಕ್ಕಾಗಿ ಭಾರತೀಯ ಪಕ್ಷಕಾರನು ಸ್ಥಾಪಿಸಿದ ಅಥವಾ ಆರ್ಜಿಸಿದ ಭಾರತದ ಹೊರಗಡೆಯ ಪ್ರತಿ ಜೆವಿ ಅಥವಾ ಡಬ್ಲ್ಯುಓಎಸ್ ಗೆ ಸಂಬಂಧಿಸಿದಂತೆ ನಮೂನೆ ಎಪಿಆರ್ ನಲ್ಲಿ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು, ಆತಿಥೇಯ ರಾಷ್ಟ್ರದ ಸಂಬಂಧಪಟ್ಟ ಕಾನೂನುಗಳು ನಿರ್ದಿಷ್ಟಪಡಿಸಿದಂತೆ ಶಾಸನಬದ್ಧ ಅವಧಿಯ ಮುಕ್ತಾಯದ ದಿನಾಂಕದಿಂದ 60 ದಿನಗಳ ಒಳಗಾಗಿ ಪ್ರತಿ ವರ್ಷ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸುವುದು. ಈ ವಾರ್ಷಿಕ ಕಾರ್ಯನಿರ್ವಹಣಾ ವರದಿಯೊಂದಿಗೆ–

ಎ. ಲಾಭಾಂಶ, ರಾಜಧನ ಇತ್ಯಾದಿಗಳ ಕಾರಣದಿಂದ ಸ್ವೀಕೃತಿ ಹಣ ರವಾನೆಗಳಿಗೆ ಸಮರ್ಥನೆಯಾಗಿ ಎಫ್‌ಐಆರ್‌ಸಿಗಳ ಪ್ರತಿಗಳು;

ಬಿ. ಸಾಗರೋತ್ತರ ಉದ್ಯಮದ ಲೆಕ್ಕ ಪರಿಶೋಧಿತ ಹಣಕಾಸು ವಿವರಪಟ್ಟಿಗಳು;

ಸಿ. ರಫ್ತು ಹುಟ್ಟುವಳಿಯ ಗಳಿಕೆಗೆ ಸಮರ್ಥನೆಯಾಗಿ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಪಡೆದ ಪ್ರಮಾಣಪತ್ರ;

ಡಿ. ಹಣಕಾಸಿನ ವಿಷಯವಾಗಿ ಏರಿಳಿತಗಳು, ಕಾರ್ಯಸಾಧನೆಯನ್ನು ಮಾಡದಿರುವುದಕ್ಕೆ ಸಂಬಂಧಿಸಿದ ಕಾರಣಗಳು ಇತ್ಯಾದಿಗಳನ್ನು ಎತ್ತಿ ತೋರಿಸುವ ಮೂಲಕ ಹಿಂದಿನ ವರ್ಷಾವಧಿಯಲ್ಲಿನ ಜೆವಿ/ಡಬ್ಲ್ಯುಓಎಸ್‌ನ ಕಾರ್ಯ ನಿರ್ವಹಣೆ ಕುರಿತ ಟಿಪ್ಪಣಿ–ಇವುಗಳನ್ನು ಲಗತ್ತಿಸಿರತಕ್ಕದ್ದು.

ಪ್ರವರ್ತಕ ಕಂಪನಿಯು ನಿಗದಿಪಡಿಸಿದ ಕಾಲಾವಧಿಯೊಳಗಾಗಿ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸಲು ಅಸಮರ್ಥವಾದ ಪಕ್ಷದಲ್ಲಿ, ಅದಕ್ಕೆ ಕಾರಣಗಳನ್ನು ನೀಡಿ ಕಾಲಾವಧಿಯನ್ನು ವಿಸ್ತರಿಸುವಂತೆ ಕೋರಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ವಾಯಿದೆಯ ದಿನಾಂಕದಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

38. ವಾರ್ಷಿಕ ಕಾರ್ಯನಿರ್ವಹಣಾ ವರದಿ (ಎಪಿಆರ್) ಗಳನ್ನು ಸಲ್ಲಿಸದಿರುವುದಕ್ಕೆ ವಿಧಿಸುವ ದಂಡಗಳಾವುವು?

ಫೆಮಾ 1999ರಡಿ ನಿಗದಿಪಡಿಸಲಾದಂತಹ ವರದಿಗಳ ವಿಳಂಬಿತ ಸಲ್ಲಿಕೆ/ಸಲ್ಲಿಸದಿರುವಿಕೆಯ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕು ಅದು ಸೂಕ್ತವೆಂದು ಭಾವಿಸಬಹುದಾದಂತೆ ಕರ್ತವ್ಯ ಚ್ಯುತಿ ಭಾರತೀಯ ಪಕ್ಷಕಾರನ ವಿರುದ್ಧ ಗಂಭೀರವಾದ ನಿಲುವನ್ನು ತಳೆಯಬಹುದು ಮತ್ತು ಸದರಿ ಅಧಿನಿಯಮದಡಿ ನಿಗದಿಪಡಿಸಲಾದಂತಹ ಕ್ರಮಗಳನ್ನು ತೆಗೆದುಕೊಳ್ಳಬಹುದು.

39. ಜೆವಿ/ಡಬ್ಲ್ಯುಒಎಸ್‌ನಲ್ಲಿ ಹಾಲಿ ಹೊಂದಿರುವ ಬಂಡವಾಳವನ್ನು ಹಿಂತೆಗೆಯುವುದಕ್ಕೆ ರಿಸರ್ವ್ ಬ್ಯಾಂಕ್‌ನ ಪೂರ್ವ ಅನುಮತಿ ಪಡೆಯಬೇಕಾಗುತ್ತದೆಯೇ?

ಇನ್ನೊಬ್ಬ ಭಾರತೀಯ ಪಕ್ಷಕಾರನಿಗಾಗಲಿ (ಸ್ವಯಂ ಚಾಲಿತ ಮಾರ್ಗದಲ್ಲಿ ಅಂತಹ ಬಂಡವಾಳ ಹೂಡಿಕೆಗಳನ್ನು ಮಾಡಲು ಅರ್ಹನಾಗಿರುವಂಥವನು) ಇಲ್ಲವೇ ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಗಾಗಲೀ ಮಾರಾಟ ಮಾಡುವ ರೂಪದಲ್ಲಿ ಬಂಡವಾಳವನ್ನು ಹಿಂತೆಗೆದುಕೊಳ್ಳುವುದಕ್ಕೆ ರಿಸರ್ವ್ ಬ್ಯಾಂಕ್‌ನ ಯಾವುದೇ ಪೂರ್ವ ಅನುಮತಿ ಬೇಕಾಗಿಲ್ಲ. ಆದರೆ,

ಎ. ಬಂಡವಾಳ ಹಿಂತೆಗೆದುಕೊಳ್ಳುವುದು ಮನ್ನಾ ಮಾಡುವುದಕ್ಕೆ ಕಾರಣವಾಗಬಾರದು (ಆದರೂ, ಪಟ್ಟಿ ಮಾಡಲಾದ ಭಾರತೀಯ ಕಂಪನಿಗಳಿಗೆ ಹಿಂದಿನ ವರ್ಷಗಳ ರಫ್ತು ಗಳಿಕೆಯ ಶೇಕಡ 10ರವರೆಗೆ ಬಂಡವಾಳವನ್ನು ಮನ್ನಾ ಮಾಡಲು ಅನುಮತಿ ನೀಡಲಾಗಿದೆ);

ಬಿ. ಸಾಗರೋತ್ತರ ಉದ್ಯಮವು ತನ್ನ ಎಲ್ಲ ಬಾಕಿಗಳನ್ನು ಮರಳಿ ಕಳುಹಿಸಬೇಕು;

ಸಿ. ಸಾಗರೋತ್ತರ ಉದ್ಯಮವು ಕನಿಷ್ಠ ಒಂದು ವರ್ಷದವರೆಗಾದರೂ ಕಾರ್ಯ ನಿರ್ವಹಿಸುತ್ತಿದ್ದು, ನಿರ್ದಿಷ್ಟಪಡಿಸಿದ ದಸ್ತಾವೇಜುಗಳೊಂದಿಗೆ ಅಂದಿನವರೆಗೆ ವ್ಯವಸ್ಥೆಗೊಳಿಸಲಾದ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಸಲ್ಲಿಸಬೇಕು;

ಡಿ. ಭಾರತೀಯ ಪಕ್ಷಕಾರನು ಯಾವುದೇ ತನಿಖಾ/ನಿಯಂತ್ರಣ ಪ್ರಾಧಿಕಾರದಿಂದ ತನಿಖೆಗೊಳಪಟ್ಟಿರಬಾರದು;

ಇ. ಮಾರಾಟವನ್ನು, ಸಾಗರೋತ್ತರ ಜೆವಿ ಅಥವಾ ಡಬ್ಲ್ಯುಒಎಸ್‌ನ ಷೇರುಗಳನ್ನು ಪಟ್ಟಿ ಮಾಡಲಾಗಿರುವಂತಹ ಶೇರು ವಿನಿಮಯ ಕೇಂದ್ರದ ಮೂಲಕ ಮಾಡಬೇಕು;

ಎಫ್. ಷೇರುಗಳನ್ನು ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಿರದಿದ್ದಲ್ಲಿ ಮತ್ತು ಬಂಡವಾಳವನ್ನು ಖಾಸಗಿ ವ್ಯವಸ್ಥೆಯ ಮೂಲಕ ಹಿಂತೆಗೆದುಕೊಳ್ಳುವಂತಿದ್ದಲ್ಲಿ ಷೇರಿನ ಮಾರಾಟದ ಬೆಲೆಯು ಸೆಬಿಯಲ್ಲಿ ನೋಂದಾಯಿಸಿಕೊಂಡಿರುವ ಚಾರ್ಟರ್ಡ್ ಅಕೌಂಟೆಂಟ್/ಪ್ರಮಾಣೀಕೃತ ಸಾರ್ವಜನಿಕ ಲೆಕ್ಕಾಧಿಕಾರಿ/1ನೇ ಪ್ರವರ್ಗದ ವ್ಯಾಪಾರಿ ಬ್ಯಾಂಕರನು ಪ್ರಮಾಣೀಕರಿಸಿದ ಮೌಲ್ಯಕ್ಕಿಂತ ಕಡಿಮೆಯಿರಬಾರದು.

ಮೇಲಿನ ಷರತ್ತುಗಳು, ಭಾರತೀಯ ಪಕ್ಷಕಾರನು ತನ್ನ ಹಾಲಿಯಿರುವ ಜೆವಿ/ಡಬ್ಲ್ಯುಒಎಸ್ ಅನ್ನು ಸಮಾಪನಗೊಳಿಸ ಬಯಸಿದಾಗ/ಮುಚ್ಚ ಬಯಸಿದಾಗಲೂ ಕೂಡ ಅನ್ವಯವಾಗುತ್ತವೆ.

40. ಅಂತಹ ಬಂಡವಾಳ ಹಿಂತೆಗೆಯುವಿಕೆಗಾಗಿ ಅನುಸರಿಸಬೇಕಾದ ಕಾರ್ಯವಿಧಾನವೇನು ಮತ್ತು ಜೆವಿ/ಡಬ್ಲ್ಯುಒಎಸ್‌ನಲ್ಲಿ ಹಾಲಿ ಹೊಂದಿರುವ ಹಿಡುವಳಿಯ ಬಂಡವಾಳವನ್ನು ಹಿಂತೆಗೆಯುವುದಕ್ಕೆ ಸಲ್ಲಿಸಬೇಕಾದ ದಸ್ತಾವೇಜುಗಳಾವುವು?

ಭಾರತೀಯ ಪಕ್ಷಕಾರನು ಈ ಮುಂದಿನ ದಸ್ತಾವೇಜುಗಳೊಂದಿಗೆ/ಮಾಹಿತಿಯೊಂದಿಗೆ ಗೊತ್ತುಪಡಿಸಲಾದ ಅಧಿಕೃತ ವ್ಯಾಪಾರಿಗೆ/ರಿಸರ್ವ್ ಬ್ಯಾಂಕ್‌ಗೆ (ಪ್ರಸ್ತಾವನೆಯು ಅಧಿಕೃತ ಡೀಲರನಿಂದ ಪರಿಗಣಿತವಾಗಲು ಅರ್ಹವಾಗಿಲ್ಲದಿದ್ದ ಪಕ್ಷದಲ್ಲಿ) ಬಂಡವಾಳ ಹಿಂತೆಗೆಯುವುದಕ್ಕೆ ಅರ್ಜಿ ಸಲ್ಲಿಸಬಹುದು.

i. ಬಂಡವಾಳ ಹಿಂತೆಗೆಯುವುದಕ್ಕೆ ಕಾರಣಗಳನ್ನು ನೀಡಿರುವ ಪತ್ರ;
ii. ಜೆವಿ/ಡಬ್ಲ್ಯುಒಎಸ್ ನ ಕಾರ್ಯ ನಿರ್ವಹಣೆ ಕುರಿತ ಇತ್ತೀಚಿನ ವಾರ್ಷಿಕ ಕಾರ್ಯನಿರ್ವಹಣಾ ವರದಿ;
iii. ಬಂಡವಾಳ ಹಿಂತೆಗೆತಕ್ಕೆ ಅನುಮೋದನೆ ನೀಡಿರುವ ಮತ್ತು ಅನುಮೋದಿತ ಬಂಡವಾಳ ಹಿಂತೆಗೆತದ ಮೊಬಲಗನ್ನು ಸೂಚಿಸಿರುವ ಮಂಡಳಿಯ ಠರಾವಿನ ದೃಢೀಕೃತ ಯಥಾ ಪ್ರತಿ;
iv. ಖರೀದಿದಾರನಿಂದ ಪ್ರಸ್ತಾವನೆಯ ಪತ್ರ;
v. ವಿದೇಶದಲ್ಲಿನ ಜೆವಿ ಯಲ್ಲಿನ ಷೇರಿನ ಬಂಡವಾಳವನ್ನು ಹಿಂತೆಗೆಯುವ ಪಕ್ಷದಲ್ಲಿ ಪಾಲುದಾರರಿಂದ ಒಪ್ಪಿಗೆಯ ಪತ್ರ;
vi. ಜೆವಿ/ಡಬ್ಲ್ಯುಒಎಸ್‌ನ ಷೇರುಗಳ ಮೌಲ್ಯದ ಮೇಲಿನ ಮೌಲ್ಯಮಾಪನದ ಪ್ರಮಾಣಪತ್ರ;
vii. ಭಾರತೀಯ ಪಕ್ಷಕಾರನಿಗೆ, ಯಾವುದೆ ಬಾಕಿಗಳು ಬಾಕಿಯಿರುವುದಿಲ್ಲವೆಂದು ಪ್ರಮಾಣೀಕರಿಸಿ ಅಥವಾ ಭಾರತೀಯ ಪಕ್ಷಕಾರನಿಗೆ ಜೆವಿ/ಡಬ್ಲ್ಯುಒಎಸ್‌ನಿಂದ ಬರಬೇಕಾಗಿರುವ ಯಾವುದೆ ಬಾಕಿಗಳ ವಿವರಗಳನ್ನು ತೋರಿಸಿ ಚಾರ್ಟರ್ಡ್ ಅಕೌಂಟೆಂಟನು ನೀಡಿದ ಪ್ರಮಾಣಪತ್ರ.

41. ಭಾರತದಲ್ಲಿ ವಾಸವಾಗಿರುವ ನಿವಾಸಿಯು ರಿಸರ್ವ್ ಬ್ಯಾಂಕ್‌ನ ಪೂರ್ವ ಅನುಮೋದನೆಯಿಲ್ಲದೆ ವಿದೇಶಿ ಭದ್ರತೆಗಳನ್ನು ಆರ್ಜನೆ/ಮಾರಾಟ ಮಾಡಬಹುದೇ?

ನಿವಾಸಿ ವ್ಯಕ್ತಿಗಳು ಈ ಮುಂದಿನ ಸಂದರ್ಭಗಳಲ್ಲಿ ಪೂರ್ವ ಅನುಮೋದನೆಯಿಲ್ಲದೆ ವಿದೇಶಿ ಭದ್ರತೆಗಳನ್ನು ಆರ್ಜನೆ/ಮಾರಾಟ ಮಾಡಬಹುದು:

i. ಭಾರತದ ಹೊರಗಡೆಯ ವ್ಯಕ್ತಿಯಿಂದ ದಾನವಾಗಿ ಪಡೆದಿದ್ದ ಸಂದರ್ಭದಲ್ಲಿ;

ii. ಭಾರತದಿಂದ ಯಾವುದೆ ಹಣ ರವಾನೆಯನ್ನು ಒಳಗೊಂಡಿರದಂತಹ ನಗದು ರಹಿತ ನೌಕರರ ಸ್ಟಾಕ್ ಆಯ್ಕೆ ಯೋಜನೆಯಡಿ ಭಾರತದ ಹೊರಗಡೆ ನಿಗಮಿತಗೊಂಡ ಕಂಪನಿಯು ನೀಡಿದ ಇಎಸ್‌ಒಪಿಗಳ ರೂಪದಲ್ಲಿ;
iii. ವಿದೇಶಿ ಕಂಪನಿಯ ಅಥವಾ ವಿದೇಶಿ ಕಂಪನಿಯ ಭಾರತದಲ್ಲಿರುವ ಅಧೀನ ಘಟಕದ ಅಥವಾ ವಿದೇಶಿ ಈಕ್ವಿಟಿ ಹಿಡುವಳಿಯು ಶೇಕಡ 51ಕ್ಕಿಂತ ಕಡಿಮೆಯಿರದಿರುವಂತಹ ಭಾರತೀಯ ಕಂಪನಿಯ ಅಧೀನ ಘಟಕದ ಭಾರತದ ಕಚೇರಿಯ ಅಥವಾ ಶಾಖೆಯ ನೌಕರನಿಗೆ ಅಥವಾ ನಿರ್ದೇಶಕನಿಗೆ ನೀಡಲಾದ ಇಎಸ್‌ಒಪಿಗಳ ರೂಪದಲ್ಲಿ;
iv. ಭಾರತದಲ್ಲಿ ಅಥವಾ ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಪಿತ್ರಾರ್ಜಿತವಾಗಿ;
v. ವಿದೇಶಿ ವಿನಿಮಯ ನಿರ್ವಹಣೆ (ವಿದೇಶಿ ಕರೆನ್ಸಿ ಖಾತೆ) ನಿಯಂತ್ರಣ (FEMA), 2000ಕ್ಕೆ ಅನುಸಾರವಾಗಿ ನಿರ್ವಹಿಸಲಾದ ನಿವಾಸಿ ವಿದೇಶಿ ಕರೆನ್ಸಿ ಖಾತೆಯಲ್ಲಿ ಹೊಂದಿರುವ ನಿಧಿಗಳಿಂದ ವಿದೇಶೀ ಭದ್ರತೆಗಳ ಖರೀದಿ ರೂಪದಲ್ಲಿ;

vi. ಈಗಾಗಲೇ ಅವರು ಹೊಂದಿರುವ ವಿದೇಶಿ ಭದ್ರತೆಗಳ ಮೇಲೆ ಬೋನಸ್ಸು/ಹಕ್ಕಿನ ಷೇರುಗಳ ರೂಪದಲ್ಲಿ;

vii. ಬಂಡವಾಳ ಹೂಡಿದ ವರ್ಷದ ಜನವರಿ 1 ರಂದು ಇದ್ದಂತೆ ಭಾರತದಲ್ಲಿನ ಮಾನ್ಯತೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಲಾದ ಭಾರತೀಯ ಕಂಪನಿಯಲ್ಲಿ ಕನಿಷ್ಠ ಶೇ.10 ರಷ್ಟು ಷೇರನ್ನಾದರೂ ಹೊಂದಿರುವಂಥ ಪಟ್ಟಿ ಮಾಡಲಾದ ಸಾಗರೋತ್ತರ ಕಂಪನಿಗಳಲ್ಲಿನ ಷೇರುಗಳ ರೂಪದಲ್ಲಿ;

viii. vii ರಲ್ಲಿರುವಂತೆ ಕಂಪನಿಗಳು ನೀಡಿದ ಬೆಲೆಯುಳ್ಳ ಋಣ ಭದ್ರತೆಗಳ ರೂಪದಲ್ಲಿ.

42. ಭಾರತೀಯ ನಿಗಮಿತ ಕಂಪನಿಗಳು ನೇರ ಬಂಡವಾಳ ಹೂಡಿಕೆಯ ರೂಪದಲ್ಲಲ್ಲದೆ ಇತರೆ ರೀತಿಯಲ್ಲಿ ಸಾಗರೋತ್ತರ ಬಂಡವಾಳ ಹೂಡಬಹುದೇ?

ಹೂಡಬಹುದು, ಪಟ್ಟಿ ಮಾಡಲಾದ ಭಾರತೀಯ ಕಂಪನಿಗಳು, ಬಂಡವಾಳ ಹೂಡಿಕೆಯ ವರ್ಷದ ಜನವರಿ 1ರಂದು ಇದ್ದಂತೆ ಭಾರತದಲ್ಲಿನ ಮಾನ್ಯತೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಲಾದ ಭಾರತೀಯ ಕಂಪನಿಯಲ್ಲಿ ಕನಿಷ್ಠ ಶೇಕಡ 10ರಷ್ಟು ಷೇರನ್ನು ಹೊಂದಿರುವಂಥ ಮಾನ್ಯತೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಲಾದ ಸಾಗರೋತ್ತರ ಕಂಪನಿಗಳಲ್ಲಿ ನಿವ್ವಳ ಮೌಲ್ಯದ ಶೇಕಡ 25ರವರೆಗೆ ಅಥವಾ ಆ ಕಂಪನಿಗಳು ನೀಡಿದ ಬೆಲೆಯುಳ್ಳ ಋಣ ಭದ್ರತೆಗಳ ರೂಪದಲ್ಲಿ ಬಂಡವಾಳ ಹೂಡಬಹುದು. ಆದರೆ, ಈ ಶೇ. 10ರ ಹಿಡುವಳಿಯು ನೇರ ಹಿಡುವಳಿಯಾಗಿರಬೇಕೇ ಹೊರತು ಅಧೀನ ಘಟಕದ (SPV) ಮೂಲಕ ಅಥವಾ ವಿಶೇಷ ಉದ್ದೇಶ ವಾಹಕದ ಮೂಲಕ ಮಾಡಲಾದ ಹಿಡುವಳಿಯಾಗಿರಬಾರದು.

43. ವ್ಯಕ್ತಿಯು ವಿದೇಶಿ ಕಂಪನಿಯ ಷೇರುಗಳನ್ನು ಆರ್ಜಿಸಬಹುದಾದಂತಹ ಇತರ ಯಾವುದಾದರೂ ಉಪಬಂಧಗಳಿವೆಯೇ?

ಹೌದು, ಇವೆ. ನಿವಾಸಿ ವ್ಯಕ್ತಿಗಳು ವಾರ್ಷಿಕ 25,000/– ಅಮೆರಿಕಾ ಡಾಲರ್‌ಗಳ ವರೆಗೆ ವಿದೇಶಿ ಭದ್ರತೆಗಳಲ್ಲಿ ಬಂಡವಾಳ ಹೂಡಿಕೆಗಳನ್ನು ಮಾಡಬಹುದು. ಆದರೆ, ಬಂಡವಾಳ ಹೂಡಿಕೆಗಳನ್ನು ಎಪಿ (ಡಿಐಆರ್ ಶ್ರೇಣಿಗಳು) ಸುತ್ತೋಲೆ ಸಂ. 64, ದಿನಾಂಕ ಫೆಬ್ರವರಿ 4, 2004ಕ್ಕೆ ಅನುಸಾರವಾಗಿ ಮಾಡಬೇಕು. ಪ್ರಶ್ನೆ 41ಕ್ಕೆ ನೀಡಲಾದ ಉತ್ತರದ viiನೆ ಬಾಬಿನಲ್ಲಿನ ನಿರ್ಬಂಧವು ಅನ್ವಯಿಸುವುದಿಲ್ಲ. ಅಂತಹ ಬಂಡವಾಳ ಹೂಡಿಕೆಗಳನ್ನು ಭಾರತೀಯ ಕಂಪನಿಗಳು ವಿದೇಶದಲ್ಲಿ ಸ್ಥಾಪಿಸಿದ ಜೆವಿ/ಡಬ್ಲ್ಯುಒಎಸ್ ನ ಷೇರುಗಳಲ್ಲಿ ಕೂಡ ಮಾಡಬಹುದಾಗಿದೆ. ಆದರೆ, ವಿದೇಶಿ ವಿನಿಮಯವನ್ನು ಸಂದಾಯ ಮಾಡಬೇಕು ಮತ್ತು ಸದರಿ ಸುತ್ತೋಲೆಯಲ್ಲಿ ನಿಗದಿಪಡಿಸಲಾದ ಅಗತ್ಯತೆಗಳನ್ನು ವರದಿ ಮಾಡುವುದಕ್ಕೆ ಒಳಪಟ್ಟಿರಬೇಕು.

44. ನಿವಾಸಿ ವ್ಯಕ್ತಿಯು ನಿರ್ದೇಶಕನಾಗಿ ತನ್ನ ಸಾಮರ್ಥ್ಯದಲ್ಲಿ ವಿದೇಶಿ ಕಂಪನಿಯ ಷೇರುಗಳನ್ನು ಆರ್ಜಿಸಬಹುದೇ?

ಹೌದು. ನಿರ್ದೇಶಕನ ಹುದ್ದೆಯನ್ನು ಹೊಂದುವುದಕ್ಕೆ ಹೊಂದಿರಬೇಕಾದ ಕನಿಷ್ಠ ಸಂಖ್ಯೆಯ ಅರ್ಹತಾ ಷೇರುಗಳಷ್ಟು ಮಟ್ಟಿಗೆ ವಿದೇಶಿ ಭದ್ರತೆಗಳನ್ನು ಆರ್ಜಿಸಲು ನಿವಾಸಿ ವ್ಯಕ್ತಿಗೆ ಭಾರತೀಯ ರಿಸರ್ವ್ ಬ್ಯಾಂಕು ಸಾಮಾನ್ಯ ಅನುಮತಿಯನ್ನು ನೀಡಿದೆ. ಆದರೆ, ಅಂತಹ ಷೇರುಗಳು ಕಂಪನಿಯ ಸಂದಾಯಿತ ಬಂಡವಾಳದ ಶೇಕಡ 1ರಷ್ಟಕ್ಕಿಂತ ಹೆಚ್ಚಿರಬಾರದು ಮತ್ತು ಅಂತಹ ಷೇರುಗಳಿಗಾಗಿ ರವಾನಿಸಬೇಕಾದ ಮೊಬಲಗು ಒಂದು ಕ್ಯಾಲೆಂಡರ್ ವರ್ಷದಲ್ಲಿ 20,000/– ಅಮೆರಿಕಾ ಡಾಲರ್‌ಗಳಿಗಿಂತ ಹೆಚ್ಚಿರಬಾರದು.

45. ನಿವಾಸಿ ವ್ಯಕ್ತಿಯು ತಾನು ಹೊಂದಿರುವ ಹಕ್ಕಿನ ಷೇರುಗಳ ನೀಡಿಕೆಗೆ ವಂತಿಗೆ ನೀಡಬಹುದೇ?

ಹೌದು. ನಿವಾಸಿ ವ್ಯಕ್ತಿಯು ಭಾರತದ ಹೊರಗಡೆ ನಿಗಮಿತಗೊಂಡಿರುವ ಕಂಪನಿಯು ನೀಡಿದ ಹಕ್ಕಿನ ಷೇರುಗಳ ರೂಪದಲ್ಲಿ ವಿದೇಶಿ ಭದ್ರತೆಗಳನ್ನು ಆರ್ಜಿಸಬಹುದು. ಆದರೆ ಹಾಲಿಯಿರುವ ಷೇರುಗಳನ್ನು ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಹೊಂದಿರಬೇಕು.

46. ವಿದೇಶದಲ್ಲಿನ ತಮ್ಮ ಜೆವಿ/ಡಬ್ಲ್ಯುಒಎಸ್ ನಲ್ಲಿ ಷೇರುಗಳನ್ನು ಆರ್ಜಿಸುವುದಕ್ಕಾಗಿ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ನಿರತವಾಗಿರುವ ಭಾರತೀಯ ಕಂಪನಿಯ ವ್ಯಕ್ತಿಗತ ನೌಕರರಿಗೆ/ನಿರ್ದೇಶಕರಿಗೆ ಯಾವುದಾದರೂ ವಿನಾಯಿತಿಗಳಿವೆಯೇ?

ಹೌದು, ಅರ್ಜಿ ಸಲ್ಲಿಸಿದರೆ ರಿಸರ್ವ್ ಬ್ಯಾಂಕ್ ವಿದೇಶದಲ್ಲಿನ ಜೆವಿ/ಡಬ್ಲ್ಯುಒಎಸ್ ನಲ್ಲಿ ಷೇರುಗಳನ್ನು ಆರ್ಜಿಸುವುದಕ್ಕಾಗಿ ಸಾಫ್ಟ್ ವೇರ್ ಕ್ಷೇತ್ರದಲ್ಲಿ ನಿರತವಾಗಿರುವ ಭಾರತೀಯ ಪ್ರವರ್ತಕ ಕಂಪನಿಯ ವ್ಯಕ್ತಿಗತ ನೌಕರರಿಗೆ/ನಿರ್ದೇಶಕರಿಗೆ ಅನುಮತಿ ನೀಡುತ್ತದೆ ಆದರೆ:

i. ಖರೀದಿಯ ಪ್ರತಿಫಲವು ಐದು ಕ್ಯಾಲೆಂಡರ್ ವರ್ಷಗಳ ಒಂದು ಬ್ಲಾಕ್ ಅವಧಿಯಲ್ಲಿ ಪ್ರತಿ ನೌಕರನಿಗೆ 10,000 ಅಮೆರಿಕಾ ಡಾಲರ್ ಅಥವಾ ಅದಕ್ಕೆ ಸರಿಸಮನಾದ ಮೊಬಲಗಿಗಿಂತ ಹೆಚ್ಚಾಗಬಾರದು.
ii. ಎಲ್ಲಾ ನೌಕರರು/ನಿರ್ದೇಶಕರು ಆರ್ಜಿಸಿದ ಷೇರುಗಳು ಭಾರತದ ಹೊರಗಡೆಯ ಜಂಟಿ ಉದ್ಯಮದ ಅಥವಾ ಸಂಪೂರ್ಣ ಒಡೆತನದ ಅಧೀನ ಘಟಕದ ಸಂದಾಯಿತ ಬಂಡವಾಳದ ಶೇಕಡಾ 5ಕ್ಕಿಂತ ಹೆಚ್ಚಾಗಬಾರದು, ಮತ್ತು
iii. ಅಂತಹ ಷೇರುಗಳನ್ನು ಹಂಚಿಕೆ ಮಾಡಿದ ನಂತರ, ಅದರ ನೌಕರರಿಗೆ ಹಂಚಿಕೆ ಮಾಡಲಾದ ಷೇರುಗಳ ಜೊತೆಗೆ ಭಾರತೀಯ ಪ್ರವರ್ತಕ ಕಂಪನಿಯು ಹೊಂದಿರುವ ಷೇರುಗಳ ಶೇಕಡಾ ಪ್ರಮಾಣವು ಅಂತಹ ಹಂಚಿಕೆಗೆ ಮುಂಚೆ ಭಾರತೀಯ ಪ್ರವರ್ತಕ ಕಂಪನಿಯು ಹೊಂದಿದ್ದಂಥ ಷೇರುಗಳ ಶೇಕಡ ಪ್ರಮಾಣಕ್ಕಿಂತ ಕಡಿಮೆಯಿರಬಾರದು.

ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕು ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ನಿರತವಾಗಿರುವ ಭಾರತೀಯ ಕಂಪನಿಯು, ಎಡಿಆರ್/ಜಿಡಿಆರ್ ಸಂಪರ್ಕವುಳ್ಳ ಸ್ಟಾಕ್ ಆಯ್ಕೆ ಯೋಜನೆಯಡಿ ವಿದೇಶಿ ಭದ್ರತೆಗಳನ್ನು ಖರೀದಿಸಲು ಅದರ ನಿವಾಸಿ ನೌಕರರಿಗೆ (ಕಾರ್ಯ ನಿರ್ವಹಿಸುತ್ತಿರುವ ನಿರ್ದೇಶಕರು ಸೇರಿದಂತೆ) ಸಹ ಅನುಮತಿ ನೀಡಬಹುದು. ಆದರೆ, ಖರೀದಿಯ ಪ್ರತಿಫಲವು ಐದು ಕ್ಯಾಲೆಂಡರ್ ವರ್ಷಗಳ ಬ್ಲಾಕ್ ಅವಧಿಯಲ್ಲಿ, 50,000 ಅಮೆರಿಕಾ ಡಾಲರ್ ಅಥವಾ ಅದಕ್ಕೆ ಸರಿಸಮನಾದ ಮೊಬಲಗಿಗಿಂತ ಹೆಚ್ಚಾಗಬಾರದು.